ಐಕ್ಯರಂಗ

(ವಾರ ಪತ್ರಿಕೆ)

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 51 ಡಿಸೆಂಬರ್ 26, 1982 ಬೆಲೆ 60 ಪೈಸೆ

ಸಿ.ಪಿ.ಐ. (ಎಂ) ಉಮೇದ್ವಾರರು :

1) ಕಾಂ| ಪಿ. ರಾಮಚಂದ್ರರಾವ್ - ಉಳ್ಳಾಲ ಕ್ಷೇತ್ರ (ದ.ಕ.)
2) ಕಾಂ| ಎಚ್. ಸೂರ್ಯನಾರಾಯಣರಾವ್—ವರ್ತೂರು ಕ್ಷೇತ್ರ (ಬೆಂಗಳೂರು ಜಿಲ್ಲೆ)
3) ಕಾಂ| ಟಿ. ಎಸ್. ಮಣಿ—ಕೆ.ಜಿ ಎಫ್. ಕ್ಷೇತ್ರ (ಮೀಸಲು) ಕೋಲಾರ ಜಿಲ್ಲೆ
4) ಕಾಂ| ಎ. ವಿ. ಅಪ್ಪಾಸ್ವಾಮಿ ರೆಡ್ಡಿ - ಬಾಗೇಪಲ್ಲಿ ,,

ಹಾಗೂ

5) ಶ್ರೀ ಆರ್. ವೆಂಕಟರಾಮಯ್ಯ ಮುಳಬಾಗಲು
(ವಿರೋಧ ಪಕ್ಷಗಳ ಬೆಂಬಲಿತ ಅಭ್ಯರ್ಥಿ)

ಇವರೆಲ್ಲರ ಯಶಸ್ಸಿಗಾಗಿ ದುಡಿಯಬೇಕೆಂದು ನಮ್ಮ ಕಳಕಳಿಯ ಮನವಿ

ಕುಗ್ಗುತ್ತಿರುವ ಇಂದಿರಾ ಪ್ರಭಾವ

ಮೊದಲನೆ ಸುತ್ತಿನ ಪ್ರಚಾರದ ಒಳನೋಟ

ಇಂದಿರಾ ಗಾಂಧಿಯವರು ಕರ್ನಾಟಕದಲ್ಲಿ ತಮ್ಮ ಪ್ರಥಮ ಸುತ್ತಿನ ಚುನಾವಣಾ ಪ್ರಚಾರ ಮುಕ್ತಾಯಗೊಳಿಸಿ ಹಿಂತಿರುಗಿದ್ದಾರೆ. ಈ ಹಿಂದೆ ಅವರು ಕರ್ನಾಟಕದಲ್ಲಿ ಪ್ರಚಾರ ಕೈಗೊಂಡಾಗ ಅವರಿಗೆ ದೊರೆತಿದ್ದ ಸ್ವಾಗತ, ಈ ಜೈಕಾರಗಳಾಗಲೀ, ಜನಸ್ತೋಮದ ನೂಕುನುಗ್ಗಲಾಗಲೀ ಈ ಸಲದ ಸಾರ್ವಜನಿಕ ಸಭೆಗಳಲ್ಲಿ ಕಂಡು ಬರಲಿಲ್ಲ. ಹಿಂದೆಲ್ಲ ಕೆಲವು ಕಾಲ ತಡವಾಗಿಯೇ ಸಭೆಗಳಿಗೆ ಬರುತ್ತಿದ್ದ ಶ್ರೀಮತಿಯವರು ಈ ಸಲ ಒಂದೆರಡು ಗಂಟೆ ಮುಂಚಿತವಾಗಿಯೇ ಆಗಮಿಸಿ ಸ್ಥಳೀಯ ಮುಖಂಡರಿಗೆ ತಲೆನೋವು ಉಂಟುಮಾಡಿದ್ದಾರೆ.

ಬಲಿಷ್ಠ ಕೇಂದ್ರಕ್ಕೆ ಮತ ಕೊಡಿರಿ, ಸುಭದ್ರ ಸರಕಾರಕ್ಕೆ ಮತ ಕೊಡಿರಿ, ಹಿಡಿದ ಕೆಲಸವನ್ನು ಸಾಧಿಸುವುದೇ ಕಾಂಗ್ರೆಸ್ಸಿನ ಧ್ಯೇಯ, ತಾನು ಹುಸಿ ಭರವಸೆಗಳನ್ನು ನೀಡಿಲ್ಲ, ಕೇಂದ್ರಕ್ಕೆ ಬೆಂಬಲಕೊಡುವ ಸರಕಾರಕ್ಕೇ ಮತ ನೀಡಿರಿ. ಎಂದು ಹೇಳುತ್ತಾ, ಪ್ರಾದೇಶಿಕ ಪಕ್ಷ, ಎಲ್ಲ ವಿರೋಧ ಪಕ್ಷಗಳನ್ನು ತೆಗಳಿ, ಅವರೆಲ್ಲ ವಿಚ್ಛಿದ್ರಕಾರಿ ಶಕ್ತಿಗಳಿಗೆ, ಜಾತೀವಾದಿಗಳಿಗೆ, ಸಮಾಜ ವಿದ್ರೋಹಿ ಶಕ್ತಿಗಳಿಗೆ ಸಹಾಯ ಮಾಡುತ್ತಿದ್ದಾರೆಂದು ಆಪಾದಿಸಿದ್ದಾರೆ. ಹುಣಸೂರಲ್ಲಿ ಮಾಡಿದ ತಮ್ಮ ಭಾಷಣದಲ್ಲಿ ಆರ್.ಎಸ್.ಎಸ್., ಬಿ.ಜೆ.ಪಿ, ಜೊತೆಯಲ್ಲಿ ಮಾರ್ಕ್ಸಿಸ್ಟರನ್ನೂ ಹಾಗೆಯೇ ಇತರ ಎಡ ಪಕ್ಷಗಳನ್ನೂ ನಿಂದೆ ಮಾಡಿದ್ದಾರೆ. ಮಾರ್ಕ್ಸಿಸ್ಟರು ನಮ್ಮ ಸಂಸ್ಕೃತಿ ಮತ್ತು ಸಮತಾವಾದದ ಕುರಿತು ಮಾತನಾಡುತ್ತಾರೆ, ಅದರೆ ಅದೇ ಸಮಯದಲ್ಲಿ ಪಶ್ಚಿಮ ಬಂಗಾಲದಲ್ಲಿ ಶಾಲೆಯ ಪುಸ್ತಕಗಳಿಂದ ರವೀಂದ್ರನಾಥ್ ಟಾಗೋರ್ ಅವರ ಪಾಠಗಳನ್ನು ತೆಗೆದು ಹಾಕಿದ್ದಾರೆಂದೂ ಹೇಳಿದ್ದಾರೆ.

ಈ ರೀತಿ ತನ್ನ ಮೂರು ದಿವಸಗಳ ಹಲವಾರು ಭಾಷಣಗಳಲ್ಲಿ ಇಂದಿರಾ ಗಾಂಧೀಯವರು ಸ್ವಾತಂತ್ರ್ಯ ದೊರಕಿದನಂತರ ಮತ್ತು 1980 ರಿಂದೀಚೆಗೆ ತಾನು ಏನು ಸಾಧಿಸಿದ್ದೇನೆಂಬುದರ ಕುರಿತು ಒಂದೇ ಒಂದು ಉದಾಹರಣೆಯನ್ನೂ ಕೊಡಲಿಲ್ಲ. ಈಗ ಕೇಂದ್ರ ಸರಕಾರ ಬಲಿಷ್ಠವಾಗಿದ್ದರೂ ಕೂಡ ತನ್ನ ಪಕ್ಷದ ಬಂಡುಖೋರರ ಹಾವಳಿಯನ್ನು ತಡೆಯಲಾರದೆ ಇಸ್ಪೀಟ್ ಎಲೆಗಳನ್ನು ಒಗೆಯುವಂತೆ ತನ್ನ ಪಕ್ಷದ ಆಡಳಿತೆಯಲ್ಲಿರುವ ರಾಜ್ಯಗಳ ಮುಖ್ಯ ಮಂತ್ರಿಯವರನ್ನು 3 ತಿಂಗಳಿಗೊಮ್ಮೆ ಬದಲಾಯಿಸಬೇಕಾಗಿ ಬರುತ್ತಿರುವುದೇಕೆ? ಮಹಾರಾಷ್ಟ್ರ, ಗುಜರಾತ್‌ಗಳಲ್ಲಿ ಸದ್ಯ ನಡೆಯುತ್ತಿರುವ ಗೊಂದಲಗಳಿಗೆ ಏನು ಕಾರಣ ಎಂಬುದನ್ನು ತಿಳಿಸಿರುವುದಿಲ್ಲ. ಬಲಿಷ್ಠ ಕೇಂದ್ರ ಇರುವಾಗ ಬರೋಡದಲ್ಲಿ ಸದ್ಯ ಜಾತೀಯ ದಂಗೆ ಯಾಕೆ ಹತೋಟಿಯಲ್ಲಿಲ್ಲ,ಎಂಬುದನ್ನು ವಿವರಿಸಿಲ್ಲ. ತ್ರಿಪುರ ಉಪಜಾತಿ ಜುಬಾ ಸಮಿತಿಯೊಡನೆ ಸದ್ಯದ ಚುನಾವಣೆಯಲ್ಲಿ ಒಪ್ಪಂದ ಮಾಡಿಕೊಂಡಿರುವುದನ್ನು ವಿರೋಧ ಪಕ್ಷಗಳು ಟೀಕಿಸಿದಾಗ, ತಾನು ಅವರೊಡನೆ ಒಪ್ಪಂದ ಮಾಡಿಕೊಂಡಿಲ್ಲೆಂದೂ, ಅವರೇ ತಮ್ಮೊಡನೆ ಸ್ಥಾನಗಳ ಹೊಂದಾಣಿಕೆ ಮಾಡಿಕೊಂಡಿದ್ದಾರೆಂದೂ ಪ್ರತ್ಯುತ್ತರಕೊಟ್ಟಿದ್ದಾರೆ. ಇದರರ್ಥವೇನು ? ನಾನು ಆ ಹುಡುಗಿಯನ್ನು ಮದುವೆಯಾಗಿರುವುದಿಲ್ಲ. ಆ ಹುಡುಗಿಯೇ ನನ್ನನ್ನು ಮದುವೆಮಾಡಿಕೊಂಡಿದ್ದಾಳೆಂದು ಹೇಳಿದಂತೆ ಆಗುತ್ತದಲ್ಲವೇ ?

ಹುಬ್ಬಳ್ಳಿಯಲ್ಲಿ ಭಾಷಣ ಮಾಡುತ್ತಾ ಬಡ ರೈತರಿಗೆ, ಕೃಷಿ ಕಾರ್ಮಿಕರಿಗೆ, ದಲಿತರಿಗೆ ಹಾಗೂ ಹಿಂದುಳಿದವರ ಅಭಿವೃದ್ಧಿಗಾಗಿ ಕೇಂದ್ರ ಸರಕಾರ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆಯೆಂದು ಹೇಳಿದರು. ಆದರೆ ನರಗುಂದ ಹಾಗೆಯೇ ರಾಜ್ಯಾದ್ಯಂತ ತನ್ನ ಪಕ್ಷದ ಸರಕಾರದ ಗೋಳೀಬಾರಿನಿಂದಲೇ ನೂರಾರು ರೈತರೂ-ವಿದ್ಯಾರ್ಥಿಗಳೂ ಕೊಲೆ ಮಾಡಲ್ಪಟ್ಟಿರುವ ಕುರಿತಾಗಿ ಅಗಲಿ, ರೈತರ, ವಿದ್ಯಾರ್ಥಿಗಳ, ಬೇಡಿಕೆಗಳ ಕುರಿತಾಗಲೀ ಚಕಾರ ಶಬ್ದ ಎತ್ತಲಿಲ್ಲ.

ಕೇಂದ್ರದಲ್ಲಿರುವ ತನ್ನ ಬಲಿಷ್ಠ ಸರಕಾರ ಆರ್ಥಿಕವಾಗಿ ಬಲಗೊಂಡಿದೆಯೆಂದು ಹೇಳುವಾಗ, ನಮ್ಮ ದೇಶದ ಸಾರ್ವಭೌಮತ್ವವನ್ನೇ ಒತ್ತೆಯಾಗಿಡುವ ಕರಾರಿನೊಂದಿಗೆ ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಯಿಂದ ರೂ. 5000 ಕೋಟಿ ಸಾಲ ಪಡೆದು, ರೈತರ, ಕಾರ್ಮಿಕರ ಹಕ್ಕಿಗೆ ಗಧಾ ಪ್ರಹಾರ

(8ನೇ ಪುಟ ನೋಡಿ)

ಸಂಪಾದಕೀಯ

ಜನತೆಗೆ ಒಡ್ಡಿರುವ ಸವಾಲು

ನಮ್ಮ ರಾಜ್ಯದ ಮುಖ್ಯ ಮಂತ್ರಿ ಗುಂಡೂರಾಯರು ತಮ್ಮ ಮೂರು ವರ್ಷಗಳ ಆಡಳಿತೆಯಲ್ಲಿ ಹೋರಾಡುವ ಜನತೆಯ ಮೇಲೆ ನಿಸ್ಸಂಕೋಚವಾಗಿ ಗುಂಡು ಹಾರಿಸಿದ್ದಾರೆ. ಇಂದಿರಾ ಗಾಂಧಿ ಕೊಟ್ಟಿರುವ ಸರ್ವಾಧಿಕಾರಿ ಗಧೆಯನ್ನೇ ಉಪಯೋಗಿಸಿ ಆಡಳಿತೆ ನಡೆಸಿದ್ದಾರೆ. ಕೇಂದ್ರದ ಸರಕಾರವನ್ನೂ, ಕಾಂಗ್ರೆಸ್ಸಿನ ಲೋಕಸಭೆ ಸದಸ್ಯರನ್ನೂ ಇಂದಿರಾ ಗಾಂಧಿ ಯಾವ ರೀತಿಯಲ್ಲಿ ನೋಡುತ್ತಿದ್ದಾರೊ, ಯಾವ ತರದಲ್ಲಿ ತಮ್ಮ ಅಂಕಿತದೊಳಗೆ ಇಟ್ಟುಕೊಂಡಿದ್ದಾರೋ, ನಮ್ಮ ರಾಜ್ಯದಲ್ಲಿ ಗುಂಡೂರಾಯರು ಕೂಡ ಅದೇ ರೀತಿಯಲ್ಲಿ ಆಡಳಿತೆ ನಡೆಸಿಕೊಂಡು, ತಮ್ಮ ಪಕ್ಷದ ಶಾಸಕರೆಲ್ಲ ತಮ್ಮ ಅಂಕಿತದೊಳಗೆ ಇರುವಂತೆ ಮಾಡಿಕೊಂಡಿದ್ದಾರೆ. ಕುಡಿಯುವ ಚಟ ಇದ್ದವರಿಗೆಲ್ಲ ಕುಡಿಯುತ್ತಿದ್ದಂತೆ ಇನ್ನೂ ಹೆಚ್ಚಿಗೆ ಕುಡಿಯಬೇಕೆಂಬ ಹಂಬಲವಿರುತ್ತದಂತೆ. ಹಾಗೆಯೇ ಗುಂಡೂರಾಯರಿಗೂ ಕೂಡ ಅಧಿಕಾರದ ಅಮಲೇರಿ ಅಧಿಕಾರವನ್ನು ಮನಬಂದಂತೆ ಉಪಯೋಗಿಸುವ ಪ್ರವೃತ್ತಿಯನ್ನು ಚುನಾವಣೆಯಲ್ಲಿ ಚಲಾಯಿಸಿ ಜನತೆಗೆ ಸವಾಲೊಡ್ಡಿದ್ದಾರೆ.

ಕರ್ನಾಟಕದಲ್ಲಿ ಆಡಳಿತ ಪಕ್ಷ, ಗುಂಡೂರಾವ್ ಸರಕಾರದ ಸರ್ಕಾರಿ ಯಂತ್ರವನ್ನು ಉಪಯೋಗಿಸಿಕೊಂಡಿದೆಂಬುದು ಬಹಿರಂಗವಾಗಿದೆ. ದಿಲ್ಲಿಯಲ್ಲಿ ಕಾಂಗ್ರೆಸ್ ಉಮೇದುವಾರರನ್ನು ಆರಿಸುವಾಗ, ಡಿ.ಐ.ಜಿ. (ಇಂಟಲಿಜನ್ಸಿ) ಶ್ರೀ ಕಾರ್ತಿಕೇಯನ್ ಅವರದೇ ಪ್ರಮುಖ ಪಾತ್ರವಾಗಿತ್ತೆಂದೂ, ಪ್ರತಿಯೊಬ್ಬ ಸ್ಪರ್ಧಿಯ ಪೂರ್ಣ ಚರಿತ್ರೆಯ ಕಾಗದ ಪತ್ರ ಈ ಅಧಿಕಾರಿಯ ಕೈಯಲ್ಲಿದ್ದು, ಕೊನೆಯ ಹಂತದವರೆಗೂ ಕಾಂಗ್ರೆಸ್ ಅಭ್ಯರ್ಥಿಯನ್ನು ಆರಿಸುವ ಕೆಲಸವೆಲ್ಲ ಇವರ ಸಲಹೆಯಂತೆ ನಡೆದಿದೆಂದೂ ವರದಿಯಾಗಿದೆ. ಇದರಿಂದಲೇ ಸಂತುಷ್ಟಿ ಪಡೆಯದೆ ಗುಂಡೂರಾಯರು ನಾಮಪತ್ರ ಸಲ್ಲಿಕೆಯ ಹಂತದಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿ ತಮ್ಮ ಪಕ್ಷದ ಪರವಾಗಿ ಸ್ಪರ್ಧಿಸತಕ್ಕ ಉಮೇದುವಾರರ ಹೆಸರುಗಳನ್ನು ಆಯಾ ಜಿಲ್ಲೆಗಳಿಗೆ ಕಳುಹಿಸಲು, ಪೋಲೀಸ್ ಟೆಲಿಪ್ರಿಂಟರ್‌ಗಳನ್ನು ಉಪಯೋಗಿಸಿದ್ದಾರೆ. ಅಷ್ಟೇ ಅಲ್ಲದೆ ಈ ರೀತಿ ತನ್ನ ಒಂದೇ ಪಕ್ಷದ ಸಲುವಾಗಿ ಸರಕಾರಿ ಯಂತ್ರ ಉಪಯೋಗಿಸುವುದು ತಪ್ಪಲ್ಲವೇ ಎಂದು ಪತ್ರಿಕಾ ವರದಿಗಾರರು ಕೇಳಿದಾಗ, ದೂರವಾಣಿ ಸರಿಯಾಗಿ ಕೆಲಸ ಮಾಡದಿರುವುದರಿಂದ ಪೋಲೀಸ್ ಟೆಲಿಪ್ರಿಂಟರನ್ನು ಉಪಯೋಗಮಾಡಿಕೊಳ್ಳಲಾಗಿದೆಯೆಂದು ಹೇಳಿ ತಾನು ಮಾಡಿದ್ದನ್ನು ರಕ್ಷಿಸಿಕೊಳ್ಳಲು ಪ್ರಯತ್ನ ಮಾಡಿದ್ದಾರೆ.

ತಮ್ಮ ಪಕ್ಷದ ಅಧಿಕೃತ ಅಭ್ಯರ್ಥಿಗಳನ್ನಲ್ಲದೆ ಕಾಂಗ್ರೆಸ್ ಪಕ್ಷದ ಬಂಡುಖೋರರು ಯಾರೂ ನಾಮಪತ್ರ ಸಲ್ಲಿಸದಂತೆ ಪ್ರತಿಬಂಧಿಸುವಂತೆ ಪೋಲೀಸ್

(8ನೇ ಪುಟ ನೋಡಿ)

ಸಿ. ಪಿ. ಐ. (ಎಂ), ಸಿ. ಪಿ. ಐ., ಜನತಾ ಮತ್ತು ಕ್ರಾಂತಿರಂಗ ಅಭ್ಯರ್ಥಿಗಳಿಗೆ ಮತ ನೀಡಿ

ಸರ್ವಾಧಿಕಾರಿ ಶಕ್ತಿಗಳನ್ನು ಹಿಮ್ಮೆಟ್ಟಿಸಿ—ಪ್ರಜಾಪ್ರಭುತ್ವ ಉಳಿಸಿ

ನೆರೆ ಹೊರೆ

ಪಶ್ಚಿಮ ಬಂಗಾಳ :

ಬರ ಪರಿಹಾರ ಆಂದೋಲನ

ಪಶ್ಚಿಮ ಬಂಗಾಳದಲ್ಲಿ ಭೀಕರ ಹಾವಳಿಯುಂಟುಮಾಡಿರುವ ಬರಗಾಲವನ್ನು ಎದುರಿಸಲು ಸಹಾಯ ಒದಗಿಸಬೇಕೆಂಬ ಎಡರಂಗ ಸರಕಾರದ ಕೋರಿಕೆಯನ್ನು ಮನ್ನಿಸಬೇಕೆಂದು ಕೇಂದ್ರ ಸರಕಾರವನ್ನು ಒತ್ತಾಯಿಸುವ ಚಳವಳಿ ರಾಜ್ಯಾದ್ಯಂತ ಬೆಳೆಯುತ್ತಿದೆ.

ಪಶ್ಚಿಮ ಬಂಗಾಳದ ಜನತೆ ಕೇಂದ್ರ ಸರಕಾರದಿಂದ (1) ಬರ ಪರಿಹಾರಕ್ಕಾಗಿ ರಾಜ್ಯಕ್ಕೆ 205 ಕೋಟಿ ರೂ. ನೆರವು ನೀಡಬೇಕು. (2) ಪಡಿತರ ವ್ಯವಸ್ಥೆ ಸರಿಯಾಗಿ ಉಳಿಯಲು ಪ್ರತಿ ತಿಂಗಳು ನಾಲ್ಕು ಲಕ್ಷ ಟನ್ ಆಹಾರ ಧಾನ್ಯ ಪೂರೈಸಬೇಕು. (3) ರಾಷ್ಟ್ರೀಯ ಗ್ರಾಮಾಂತರ ಉದ್ಯೋಗ ಯೋಜನೆಗೆ ಆಹಾರದ ಪೂರೈಕೆಯನ್ನು ಹೆಚ್ಚಿಸಬೇಕು. (4) ಮೂರು ಲಕ್ಷ ಟನ್ನಿನಷ್ಟು ಅಕ್ಕಿಯನ್ನು ಬೇರೆ ರಾಜ್ಯಗಳಿಂದ ತರಿಸಿಕೊಳ್ಳಲು ರಾಜ್ಯ ಸರಕಾರಕ್ಕೆ ಅನುಮತಿ ನೀಡಬೇಕು ಎಂದು ಕೇಳುತ್ತಿದೆ.

ಎಡರಂಗದ ಸಮಿತಿ ಬರಪೀಡಿತ ಪ್ರದೇಶಗಳಲ್ಲಿ ಎಡರಂಗ ಸರಕಾರ ಕೈಗೊಂಡ ಪರಿಹಾರ ಕಾರ್ಯಗಳ ಸತತ ಪರಿಶೀಲನೆ ನಡೆಸಿ ಸರಕಾರ ಕೈಗೊಳ್ಳಬೇಕಾದ ಎಲ್ಲಾ ಕ್ರಮಗಳ ಬಗ್ಗೆ ನಿರ್ಧರಿಸುತ್ತಿದೆ. ಮುಖ್ಯ ಮಂತ್ರಿಯವರು ಜಿಲ್ಲಾ ಆಡಳಿತಗಳೊಂದಿಗೆ ಮಾತುಕತೆ ನಡೆಸಿ ಪರಿಹಾರ ಕಾರ್ಯಕ್ರಮಗಳಲ್ಲಿ ಇರುವ ತೊಂದರೆಗಳನ್ನು ವಿವರವಾಗಿ ಪರಿಶೀಲಿಸಿ ಅವನ್ನು ಪರಿಹರಿಸಲು ಕ್ರಮಗಳನ್ನು ಯೋಚಿಸಿದ್ದಾರೆ. ರಾಷ್ಟ್ರೀಯ ಗ್ರಾಮಾಂತರ ಉದ್ಯೋಗ ಯೋಜನೆಯನ್ನು ಅಮೂಲಾಗ್ರವಾಗಿ ಪುನ:ಶ್ಚೇತನಮಾಡಿ ಪ್ರತಿದಿನ 6 ರೂ.— ರೂ. 4-20 ನಗದು ಹಾಗೂ ರೂ. 1-80 ಆಹಾರ ಧಾನ್ಯಗಳ ರೂಪದಲ್ಲಿ –ದಿನಗೂಲಿಯ ದರವನ್ನು ನಿಗದಿಪಡಿಸಲಾಗಿದೆ. ಈ ಯೋಜನೆಗೆ ಪೂರೈಕೆಯಾಗುವ ಆಹಾರ ಧಾನ್ಯಗಳು, ಪರಿಹಾರ ಕ್ರಮವಾಗಿ ಬರುವ ಆಹಾರ ಧಾನ್ಯಗಳು ಹಾಗೂ ಪಡಿತರ ವ್ಯವಸ್ಥೆಯ ಆಹಾರ ಧಾನ್ಯಗಳು ಇವುಗಳ ನಡುವೆ ಗೊಂದಲವಾಗದಂತೆ ಕ್ರಮಗಳನ್ನು ಕೈಗೊಳ್ಳಲಾಗಿದೆ. ದೊಡ್ಡ ಜಿಲ್ಲೆಗಳಲ್ಲಿ ಆಹಾರ ಧಾನ್ಯ ಪೂರೈಕೆಯಲ್ಲಿ ತೊಂದರೆಗಳಾಗದಂತೆ ಹೆಚ್ಚಿನ ಪೂರೈಕೆ ಕೇಂದ್ರಗಳನ್ನು ತೆರೆಯಲಾಗಿದೆ.

ಇನ್ನೊಂದು ಸಮಸ್ಯೆಯೆಂದರೆ ಅಕ್ಕಿಗೆ ಸರ್ಕಾರದ ಕೊಳ್ಳುವ ಬೆಲೆ 122 ರೂ. ಆದರೆ ಮಾರುಕಟ್ಟೆಯ ಬೆಲೆ 160 ರೂ. ಆದ್ದರಿಂದ ಸರಕಾರೀ ಬೆಲೆಯಲ್ಲಿ ಅಕ್ಕಿಕೊಳ್ಳುವುದು ಸಾಧ್ಯವಾಗುತ್ತಿಲ್ಲ. ಮಾರುಕಟ್ಟೆಯಲ್ಲಿ ಅಕ್ಕಿ ಪೂರೈಕೆ ಸ್ಥಿರವಾಗಿರಬೇಕಾದರೆ ಬೇರೆ ರಾಜ್ಯಗಳಿಂದ ಅಕ್ಕಿ ಕೊಳ್ಳಬೇಕಾಗುತ್ತದೆ. ಆದರೆ ಕೇಂದ್ರ ಸರಕಾರ ಇದಕ್ಕೆ ಅನುಮತಿ ನೀಡುತ್ತಿಲ್ಲ.

ಎಡರಂಗ ಸಮಿತಿ ಡಿಸೆಂಬರ್ ತಿಂಗಳಾಂತ್ಯದೊಳಗೆ ಮುಖ್ಯ ಮಂತ್ರಿಗಳ ಪರಿಹಾರ ನಿಧಿಗೆ 1 ಕೋಟಿ ರೂ. ಸಂಗ್ರಹಿಸಬೇಕೆಂದು ರಾಜ್ಯದ ಜನತೆಗೆ ಕರೆ ನೀಡಿದೆ.

ಕಳೆದ ಎಂಟು ತಿಂಗಳ ಅನಾವೃಷ್ಟಿಯಿಂದ ಆಗಿರುವ ನಷ್ಟ ಒಂದು ಸಾವಿರ ಕೋಟಿಗೂ ಮೀರಿದ್ದು, ಎಡರಂಗ ಸರಕಾರ ಬರಗಾಲವನ್ನು ಎದುರಿಸಲು ಸಾಧ್ಯವಾದುದನ್ನೆಲ್ಲಾ ಮಾಡುತ್ತಿದೆ. ಆದ್ದರಿಂದ ರಾಜ್ಯದ ಮೇಲೆ ಹೇಳಿದ ನಾಲ್ಕು ಬೇಡಿಕೆಗಳನ್ನು ಕೇಂದ್ರ ಸರಕಾರ ಮನ್ನಿಸುವಂತೆ ಅದರ ಮೇಲೆ ಸಾಮೂಹಿಕ ಒತ್ತಾಯ ತರಲು ಒಂದು ಬಲವಾದ ಆಂದೋಲನ ನಿರ್ಮಿಸಬೇಕೆಂದು ಸಿ. ಪಿ. ಐ. (ಎಂ)ನ ಬಂಗಾಳ ರಾಜ್ಯ ಸಮಿತಿಯ ಕಾರ್ಯದರ್ಶಿ ಮಂಡಲಿ ಪಶ್ಚಿಮ ಬಂಗಾಳದ ಎಲ್ಲಾ ಜನವಿಭಾಗಗಳಿಗೆ ಕರೆ ನೀಡಿದೆ.

ಆಂಧ್ರ ಪ್ರದೇಶ :

ನಾಗರಿಕ ಹಕ್ಕುಗಳ ಸಮಾವೇಶ

ನವೆಂಬರ್ 21 ರಂದು ವಿಜಯವಾಡಾದಲ್ಲಿ ರಾಜ್ಯದ ವಿವಿಧ ಭಾಗಗಳಿಂದ, ವಿವಿಧ ವಲಯಗಳಲ್ಲಿ ದುಡಿಯುತ್ತಿರುವ ಒಂದು ಸಾವಿರಕ್ಕೂ ಹೆಚ್ಚು ವೈದ್ಯರು, ವಕೀಲರು, ಅಧ್ಯಾಪಕರು, ರಾಜಕೀಯ ಪಕ್ಷಗಳ ಹಾಗೂ ಸಾಮೂಹಿಕ ಸಂಘಟನೆಗಳ ಮುಖಂಡರು ಸೇರಿ ನಾಗರಿಕ ಹಕ್ಕುಗಳ ರಕ್ಷಣೆಯ ಬಗ್ಗೆ ಚರ್ಚೆ ನಡೆಸಿದರು. 'ಆಂಧ್ರ ಪ್ರದೇಶ ನಾಗರಿಕ ಹಕ್ಕುಗಳ ಸಂಘ' ಈ ರಾಜ್ಯ ಮಟ್ಟದ ಸಮಾವೇಶವನ್ನು ವ್ಯವಸ್ಥೆ ಮಾಡಿತ್ತು. ಪ್ರಜಾಸತ್ತಾತ್ಮಕ ಸಮಾಜವಾದೀ ಪಕ್ಷದ ಪ್ರಧಾನ ಕಾರ್ಯದರ್ಶಿ ಶ್ರೀ ರಘುನಾಥರೆಡ್ಡಿ ಈ ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು. ಆಂಧ್ರ ಪ್ರದೇಶ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಜೀವನರೆಡ್ಡಿಯವರು ಸಮಾವೇಶವನ್ನು ಉದ್ಘಾಟಿಸಿದರು. ಲೋಕದಳ, ತೆಲುಗು ದೇಶಂ, ಜನತಾ ಪಕ್ಷ, ಕಾಂಗ್ರೆಸ್ (ಎಸ್), ಸಿ. ಪಿ. ಐ. ಹಾಗೂ ಸಿ.ಪಿ.ಐ (ಎಂ)ನ ನಾಯಕರು ಸಮಾವೇಶದಲ್ಲಿ ಮಾತನಾಡಿದರು.

ಜುಲೈ 4 ರಂದು ಮೇಲಿನ ಎಲ್ಲಾ ಪಕ್ಷಗಳು ಹಾಗೂ ಪಕ್ಷಾತೀತ ಬುದ್ಧಿಜೀವಿಗಳು ಹೈದರಾಬಾದಿನಲ್ಲಿ ನಡೆಸಿದ ಸಮಾವೇಶದ ನಿರ್ಣಯದಂತೆ ನವೆಂಬರ್ 8 ರಂದು ರಚಿತಗೊಂಡ ಸಂಯೋಜಿತ ಸಮಿತಿಯ ಪ್ರಯತ್ನಗಳ ಫಲವಾಗಿ ನಡೆದ ಈ ಯಶಸ್ವೀ ಸಮಾವೇಶ ಈ ಸಂಘಟನೆಯ ಧ್ಯೇಯೋದ್ದೇಶಗಳ ಹೇಳಿಕೆಯನ್ನು ಅಂಗೀಕರಿಸಿ ಸುಮಾರು ನೂರು ಸದಸ್ಯರಿರುವ ಮಂಡಳಿಯನ್ನು ಚುನಾಯಿಸಿತು.

ಪಂಜಾಬ್ :

ಕೋಮುವಾದಿಗಳ ಶಕ್ತಿ, ತೆರಿಗೆಗಳ ಹೊರೆ ಹೆಚ್ಚುತ್ತಿವೆ

ಕೇಂದ್ರ ಸರಕಾರ ಹಾಗೂ ಅಕಾಲಿ ದಳದ ನಡುವಿನ ಮಾತುಕತೆ ಸ್ಥಗಿತಗೊಂಡುದರ ಪರಿಣಾಮವಾಗಿ ಕೋಮು ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿದೆ. ಮಾತುಕತೆಗಳ ಮೂಲಕ ಇತ್ಯರ್ಥಕ್ಕೆ ಬಂದು ಸ್ಥಿತಿ ಸಾಮಾನ್ಯಗೊಳ್ಳಬಹುದೆಂಬ ಪಂಜಾಬೀ ಜನತೆಯ ನಿರೀಕ್ಷೆ ಸುಳ್ಳಾಗಿದೆ. ಮಾತುಕತೆ ಈ ರೀತಿ ವಿಫಲಗೊಳ್ಳಲು ಕೇಂದ್ರ ಸರಕಾರವೇ ಪ್ರಧಾನ ಕಾರಣ. ಪಂಜಾಬ್ ಸರಕಾರ ಹಾಗೂ ಹಿಂದೂ ಕೋಮುವಾದಿಗಳ ಪಾತ್ರವೂ ಇದರಲ್ಲಿದೆ. ಸಿಖ್, ಹಿಂದೂ ಈ ಎರಡೂ ಕೋಮುಗಳ ತೀವ್ರವಾದಿಗಳು ಪರಿಸ್ಥಿತಿಯ ದುರ್ಲಾಭ ಪಡೆಯುತ್ತಿದ್ದಾರೆ. ಕೇಂದ್ರ ಸರಕಾರ ಅಕಾಲಿದಳದ ಜಾತ್ಯಾತೀತವಲ್ಲದ ಬೇಡಿಕೆಗಳನ್ನು ಮನ್ನಿಸಿದೆಯಾದರೂ ಪಂಜಾಬೀ ಜನತೆಯ ನ್ಯಾಯಪೂರ್ಣ ಹಾಗೂ ಪ್ರಜಾಸತ್ತಾತ್ಮಕ ಬೇಡಿಕೆಗಳನ್ನು ಪೂರೈಸಿಲ್ಲವೆಂಬುದು ಗಮನಾರ್ಹ. ಕೇಂದ್ರ ಸರಕಾರ ತನ್ನ ಸಂಕುಚಿತ ರಾಜಕೀಯ ಸ್ವಾರ್ಥಕ್ಕಾಗಿ ಹೀಗೆ ಮಾಡುತ್ತಿದೆ. ಈ ಭರದಲ್ಲಿ ಪಂಜಾಬ್ ಒಂದು ಗಡಿ ರಾಜ್ಯ, ಸಾಮ್ರಾಜ್ಯಶಾಹಿಗಳ ಏಜೆಂಟರು ಇಲ್ಲಿ ಸಕ್ರಿಯರಾಗಿದ್ದಾರೆ ಎಂಬುದನ್ನು ಅದು ಮರೆತಿದೆ. ಈ ಮಧ್ಯೆ ಪ್ರಜಾಸತ್ತಾತ್ಮಕ ಅಭಿಪ್ರಾಯಕ್ಕೆ ಓಗೊಟ್ಟಿರುವ ಅಕಾಲಿ ದಳದ ಅಧ್ಯಕ್ಷರು ತಮ್ಮ ದಳದ ಆನಂದಪುರ ನಿರ್ಣಯದಲ್ಲಿನ ಪ್ರತ್ಯೇಕತಾವಾದೀ ನಿಲುವನ್ನು ಪರಿಷ್ಕರಿಸಿ ರಾಜ್ಯಕ್ಕೆ ಹೆಚ್ಚಿನ ಅಧಿಕಾರವನ್ನು ದೇಶದ ಸಂವಿಧಾನದ ಚೌಕಟ್ಟಿನಲ್ಲೇ ಕೇಳುತ್ತಿದ್ದೇವೆಂದು ಸ್ಪಷ್ಟಪಡಿಸಿದ್ದಾರೆ. ಬೇರೆ ರಾಜ್ಯಗಳೂ, ಪಕ್ಷಗಳೂ ಇದೇ ಬೇಡಿಕೆಯನ್ನಿಟ್ಟಿವೆಯಾದ್ದರಿಂದ ಈ ಪ್ರಶ್ನೆಗಳನ್ನು ಪರಿಶೀಲಿಸಲು ಒಂದು ಸಮಿತಿ ಅಥವಾ ಆಯೋಗ ರಚಿಸಬೇಕೆಂದು ಸಿ ಪಿ ಐ. (ಎಂ)ನ ಪಂಜಾಬ್ ರಾಜ್ಯ ಸಮಿತಿ ಒತ್ತಾಯಮಾಡಿದೆ.

ರಾಜ್ಯದಲ್ಲಿನ ಕೋಮು ವಿಭಜನೆಯ ದುರ್ಲಾಭವನ್ನು ಪಂಜಾಬ್ ಸರಕಾರವೂ ಪಡೆಯಲು ಪ್ರಯತ್ನಿಸುವಂತೆ ಕಾಣುತ್ತಿದೆ. ಅದು ಜನತೆಯ ಮೇಲೆ ಮತ್ತಷ್ಟು ತೆರಿಗೆಗಳನ್ನು, ಲೆವಿಯನ್ನು ಹೊರಿಸುತ್ತಿದೆ. ಏರುತ್ತಿರುವ ಬೆಲೆಗಳೊಂದಿಗೇ ಎಲ್ಲಾ ತರದ ಬಳಕೆಯ ದರ ಏರಿಸಲಾಗಿದೆ. ಕೃಷಿ ಸಲಕರಣೆಗಳ, ಕೀಟನಾಶಕಗಳ ಸಹಾಯ ಧನ ರದ್ದು ಮಾಡಿದ್ದರಿಂದ ಇವೆಲ್ಲಾ ಬಹಳಷ್ಟು ರೈತರ ಎಟುಕಿಗೆ ನಿಲುಕಲಾರಗಿದಾಬಿಟ್ಟಿವೆ. ಪ್ರತಿಯಾಗಿ ಬೆಳೆಗಾರರಿಗೆ ಸಿಗುವ ಬೆಲೆ ಕಡಿಮೆ ಮಾಡಲಾಗುತ್ತಿದೆ. ಉದಾಹರಣೆಗೆ ಕಬ್ಬಿಗೆ ಕಳೆದ ವರ್ಷ 4 ರೂ. ಇದ್ದು ಈ ವರ್ಷ ಅದು 3 ರೂ.ಗಿಳಿದಿದೆ.

ಇವೆಲ್ಲದರ ಜತೆಗೆ ಪೋಲೀಸರ ದಬ್ಬಾಳಿಕೆಯೂ ಹೆಚ್ಚುತ್ತಿದೆ, ಕ್ರಿಮಿನಲ್ ಪ್ರೊಸೀಜರ್ ಕೋಡನ್ನು ರಾಜಕೀಯ ಕಾರ್ಯಕರ್ತರ ವಿರುದ್ಧ ಪ್ರಯೋಗಿಸಲಾಗುತ್ತಿದೆ.

ಇಂತಹ ಪರಿಸ್ಥಿತಿಯಲ್ಲಿ ಕೋಮುವಾದಿಗಳ, ವಿಚ್ಛಿದ್ರಕಾರಿಗಳ ವಿರುದ್ಧ ಸೈದ್ಧಾಂತಿಕ ಆಂದೋಲನ ತೀವ್ರಗೊಳಿಸಲು ಸಿ.ಪಿ.ಐ. [ಎಂ]ನ ರಾಜ್ಯ ಸಮಿತಿ ನಿರ್ಧರಿಸಿದೆ. ಪಂಜಾಬೀ ಜನತೆಯ ರಾಜಕೀಯ ಹಾಗೂ ಆರ್ಥಿಕ ಬೇಡಿಕೆಗಳ ಈಡೇರಿಕೆಗಾಗಿ ಎಲ್ಲಾ ಎಡ ಹಾಗೂ ಪ್ರಜಾಪ್ರಭುತ್ವವಾದೀ ಶಕ್ತಿಗಳನ್ನು ಒಗ್ಗೂಡಿಸಿ ಚಳವಳಿ ಸಂಘಟಿಸಲು ಅದು ನಿರ್ಧರಿಸಿದೆ

●

ಕಾರ್ಮಿಕ ಮುಖಂಡರ ಮೇಲಿನ ದಾಳಿಯ ಖಂಡನೆ

ಸಿ.ಐ.ಟಿ.ಯು. ಕರ್ನಾಟಕ ರಾಜ್ಯ ಮಂಡಲಿಯ ಸದಸ್ಯರೂ, ಸಕಲೇಶಪುರದ ಕರ್ನಾಟಕ ತೋಟ ಕಾರ್ಮಿಕರ ಸಂಘದ ಖಜಾಂಚಿಯೂ ಆದ ಕಾಂ| ದೂಜರು 15 ರಂದು ಪ್ಲಾಂಟೇಷನ್ ಕಾರ್ಮಿಕರ ಮುಷ್ಕರದ ಪ್ರಚಾರದ ಕೆಲಸಕ್ಕಾಗಿ ಮಟಸಾಗರ ಕಾಫಿ ತೋಟಕ್ಕೆ ಹೋಗಿದ್ದಾಗ ಪ್ಲಾಂಟರ್ ಎಚ್. ಪಿ. ಸಂಗಪ್ಪ ಮತ್ತು ಅವರ ಪುತ್ರರು ಶಿವಾನಂದ ಮತ್ತು ದಯಾನಂದ ಕಾಂ| ದೂಜರನ್ನು ಹಿಡಿದು ಕಟ್ಟಿಹಾಕಿ ಕಬ್ಬಿಣದ ಸರಳು ಮತ್ತು ದೊಣ್ಣೆಗಳಿಂದ ತೀವ್ರವಾಗಿ ಥಳಿಸಿರುತ್ತಾರೆ. ಐನೂರಕ್ಕಿಂತಲೂ ಹೆಚ್ಚು ಪ್ಲಾಂಟೇಷನ್ ಕಾರ್ಮಿಕರು 16 ರಂದು ಸಕಲೇಶಪುರದಲ್ಲಿ ಮತಪ್ರದರ್ಶನ ನಡೆಸಿ ಕಾಂ| ದೂಜರನ್ನು ಹೊಡೆದವರನ್ನು ಬಂಧಿಸಿ ಕ್ರಮ ತೆಗೆದುಕೊಳ್ಳಬೇಕೆಂದು ಅಗ್ರಹಪಡಿಸಿದರು. ಪೋಲೀಸರು ಆಕ್ರಮಣಕಾರರನ್ನು ಬಂಧಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿದರು. ಕಾಂ| ದೂಜರನ್ನು ಅಸ್ಪತ್ರೆಗೆ ಸೇರಿಸಲಾಗಿದೆ.

ಸಕಲೇಶಪುರದ ಕಾಂಗ್ರೈ ಎಂ.ಎಲ್.ಎ ಮತ್ತು ಸ್ಥಳೀಯ ಪಟ್ಟಭದ್ರಹಿತಗಳು ಮುಂದಿನ ಕ್ರಮವನ್ನು ಕೈಬಿಡುವಂತೆ ಪೋಲೀಸರ ಮೇಲೆ ಒತ್ತಡವನ್ನು ತರುತ್ತಿದ್ದಾರೆಂದು ತಿಳಿದು ಬಂದಿದೆ.

ಪೋಲೀಸ್ ಅಧಿಕಾರಿಗಳು ಒತ್ತಡಕ್ಕೆ ಬಾಗದೆ ತಡಮಾಡದೆ ಮುಂದಿನ ಕ್ರಮ ಜರುಗಿಸಬೇಕೆಂದು ಪ್ರಕಟಣೆಯಲ್ಲಿ ಆಗ್ರಹಪಡಿಸಲಾಗಿದೆ.

●

ಬೇಡಿಕೆಗಳ ಈಡೇರಿಕೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ರಾಯಚೂರು ನಗರ ಸಮಿತಿಯ ನೇತೃತ್ವದಲ್ಲಿ ನಡೆದ ಶಾಸ್ತ್ರಿನಗರ, ನೀರಭಾವಿ ಕುಂಟಾ ಹಾಗು ಗೋಲ್ ಮಾರ್ಕೆಟ್ ಕೊಳಚೆ ಪ್ರದೇಶ ಗುಡಿಸಲು ನಿವಾಸಿಗಳ ಸಂಘದ 15 ದಿವಸದ ಸರದಿ ಉಪವಾಸ ಸತ್ಯಾಗ್ರಹವನ್ನು ದಿ. 14-12-82 ರಂದು ಬೇಡಿಕೆಗಳನ್ನು ಈಡೇರಿಸಿದ್ದಕ್ಕಾಗಿ ಹಿಂತೆಗೆದುಕೊಳ್ಳಲಾಯಿತು.

●

ಬಿ. ಇ. ಎಲ್. ಕಾರ್ಮಿಕರ ಸಂಘಕ್ಕೆ :

ಕಾಂ| ಸೂರಿ ಆಯ್ಕೆ

ಭಾರತ್ ಎಲೆಕ್ಟ್ರಾನಿಕ್ಸ್ ವರ್ಕರ್ಸ್ ಯೂನಿಯನ್ನಿನ ಸರ್ವಸದಸ್ಯರ ಸಭೆಯು 13-12-82 ರಂದು ನಡೆಯಿತು. ಸಭೆಯು ಸಿ. ಐ. ಟಿ. ಯು. ರಾಜ್ಯ ಸಮಿತಿ ಅಧ್ಯಕ್ಷರಾದ ಕಾಂ| ಎಸ್. ಸೂರ್ಯನಾರಾಯಣರಾವ್ ಅವರನ್ನು ಸಂಘದ ಅಧ್ಯಕ್ಷರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಿತು ಮತ್ತು ಉಪಾಧ್ಯಕ್ಷರುಗಳಾಗಿ ಕಾಂ| ಎಂ. ಎಸ್. ಸಿ ರಾವ್ ಕಾಂ| ಈಶ್ವರನ್ ಹಾಗೂ ಶ್ರೀಮತಿ ರೇಣುಕಾ ರಾಜನ್ ಅವರುಗಳು ಆಯ್ಕೆಯಾದರು. ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಕಾಂ| ಎಂ ಮುನಿರೆಡ್ಡಿ, ಸಂಘಟನಾ ಕಾರ್ಯದರ್ಶಿಯಾಗಿ ಕಾಂ| ವಿಭೂತಿ ಮಠ್, ಸಹ ಕಾರ್ಯದರ್ಶಿಯಾಗಿ ಕಾಂ| ಎ. ಇ. ಸುಬ್ರಹ್ಮಣ್ಯಂ ಮತ್ತು ಖಜಾಂಚಿಯಾಗಿ ಕಾಂ| ಶಂಕರ ನಾರಾಯಣ್ ಅವರುಗಳು ಅಯ್ಕೆಯಾದರು.

[ಜನವರಿ 5, 1983 ರಂದು ರಾಜ್ಯ ವಿಧಾನಸಭೆಗೆ ನಡೆಯಲಿರುವ ಚುನಾವಣೆಯಲ್ಲಿ ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ ಉಮೇದುವಾರರಾಗಿ ಸ್ಪರ್ಧಿಸಿರುವ 1. ಕಾಂ| ಪಿ. ರಾಮಚಂದ್ರರಾವ್-ಉಳ್ಳಾಲ ಕ್ಷೇತ್ರ, 2. ಕಾಂ| ಎಸ್. ಸೂರ್ಯನಾರಾಯಣ ರಾವ್-ವರ್ತೂರು ಕ್ಷೇತ್ರ, 3 ಕಾಂ| ಟಿ. ಎಸ್. ಮಣಿ — ಕೆ. ಜಿ ಎಫ್. ಕ್ಷೇತ್ರ ಮತ್ತು 4. ಕಾಂ| ಎ. ವಿ. ಅಪ್ಪಾಸ್ವಾಮಿರೆಡ್ಡಿ-ಬಾಗೇಪಲ್ಲಿ ಕ್ಷೇತ್ರ ಅವರುಗಳ ಪರಿಚಯಾತ್ಮಕ ಲೇಖನವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ.]

ಅಭ್ಯರ್ಥಿಗಳ ಪರಿಚಯ



ಕಾ| ಪಿ ರಾಮಚಂದ್ರರಾವ್

1929 ರಲ್ಲಿ ಬಡ ಮಧ್ಯಮ ವರ್ಗದ ಕುಟುಂಬದಲ್ಲಿ ಹುಟ್ಟಿದ ರಾಮಚಂದ್ರ ರಾವ್ ಅವರದು ದಕ್ಷಿಣ ಕನ್ನಡ ಜಿಲ್ಲೆ. ವಿಜ್ಞಾನ ಪದವಿ ಪಡೆದನಂತರ ಶಿಕ್ಷಕ ತರಬೇತಿ ಮುಗಿಸಿ 1951ರಲ್ಲಿ ಇವರು ಶಾಲಾ ಶಿಕ್ಷಕರಾದರು.

ಆದರ್ಶ ಶಿಕ್ಷಕರೆಂದು ಜನಸಾಮಾನ್ಯರ ಗೌರವಕ್ಕೆ ಪಾತ್ರರಾಗಿದ್ದ ಕಾಂ| ಪಿ. ರಾಮಚಂದ್ರರಾವ್ ಅವರನ್ನು ಆ ಪ್ರದೇಶಗಳಲ್ಲಿ ಗುರುತಿಸುವುದು 'ಮಾಸ್ತರ್' ಎಂದೇ.

ಶಿಕ್ಷಕರಾಗಿದ್ದಾಗಲೇ ಕಮ್ಯುನಿಸ್ಟ್ ಚಳವಳಿಯಲ್ಲಿ ಚಟುವಟಿಕೆಯಿಂದ ದುಡಿಯುತ್ತಿದ್ದವರು 'ಮಾಸ್ತರ್' 1963ರಲ್ಲಿ ಪೂರ್ಣಕಾಲದ ಕಾರ್ಯಕರ್ತರಾಗಬೇಕೆಂದು ಪಾರ್ಟಿ ತೀರ್ಮಾನಿಸಿದಾಗ ತಮ್ಮ ಶಿಕ್ಷಕ ವೃತ್ತಿಗೆ ರಾಜೀನಾಮೆ ನೀಡಿ ಪಕ್ಷದ ಕೆಲಸಕ್ಕಿಳಿದರು.

ಐಕ್ಯ ಕಮ್ಯುನಿಸ್ಟ್ ಪಕ್ಷದಲ್ಲಿ ಭಾರತ-ಚೀನಾ ಗಡಿ ಪ್ರಶ್ನೆಯ ಕುರಿತು ಭಿನ್ನಾಭಿಪ್ರಾಯ ಹೊಂದಿದವರನ್ನು ಚೈನಾ ಏಜೆಂಟರೆಂದು ಕರೆದು ಸರ್ಕಾರ ಬಂಧಿಸತೊಡಗಿದಾಗ ಕಾಂ| ಪಿ. ರಾಮಚಂದ್ರರಾವ್ ಅವರನ್ನು ಸಹ 1964 ರಲ್ಲಿ ಬಂಧಿಸಿ ಎರಡು ವರ್ಷಗಳ ಕಾಲ ಸೆರೆಮನೆಯಲ್ಲಿಡಲಾಗಿತ್ತು.

1964ರ ಅಕ್ಟೋಬರ್‌ನಲ್ಲಿ ನಡೆದ ಪಕ್ಷದ 7ನೆಯ ರಾಜ್ಯ ಸಮ್ಮೇಳನದಲ್ಲಿ ರಾಜ್ಯ ಸಮಿತಿ ಸದಸ್ಯರಾಗಿ ಚುನಾಯಿತಗೊಂಡರು.

1974ರಲ್ಲಿ ಪೊಲಿಟ್‌ಬ್ಯೂರೋ ರಾಜ್ಯ ಸಮಿತಿಯನ್ನು ನಾಲ್ಕು ಪ್ರಾದೇಶಿಕ ಸಮಿತಿಗಳನ್ನಾಗಿ ಪುನರ್ ಸಂಘಟಿಸಿದಾಗ ಕಾಂ| ರಾಮಚಂದ್ರರಾವ್ ಅವರನ್ನು ಬೆಂಗಳೂರು ಪ್ರಾದೇಶಿಕ ಸಮಿತಿಯ ಕಾರ್ಯದರ್ಶಿಯನ್ನಾಗಿ ನೇಮಿಸಿತು.

1982 ಅಕ್ಟೋಬರ್ 26 ರಂದು ಸೇರಿದ್ದ ರಾಜ್ಯ ಸಮಿತಿಯು ಕಾಂ| ರಾಮಚಂದ್ರರಾವ್ ಅವರನ್ನು ರಾಜ್ಯ ಸಮಿತಿ ಕಾರ್ಯದರ್ಶಿಯನ್ನಾಗಿ ಚುನಾಯಿಸಿದೆ.

ಕಾರ್ಮಿಕ ರಂಗದಲ್ಲೂ ಅವಿರತವಾಗಿ ದುಡಿಯುತ್ತಾ ಬಂದಿರುವ ಇವರು, ದಕ್ಷಿಣ ಕನ್ನಡ, ಮಲೆನಾಡು ಮತ್ತು ಬೆಂಗಳೂರು ಜಿಲ್ಲೆಗಳ ಹಲವಾರು ಕಾರ್ಮಿಕ ಸಂಘಟನೆಗಳ ಪದಾಧಿಕಾರಿಯಾಗಿದ್ದಾರೆ.

1970ರ ಸಿ ಐ ಟಿ.ಯು ಸ್ಥಾಪನಾ ಸಮ್ಮೇಳನದಲ್ಲಿ ಪ್ರತಿನಿಧಿಯಾಗಿ ಭಾಗವಹಿಸಿದ್ದ ಇವರು ಜನರಲ್ ಕೌನ್ಸಿಲ್ ಸದಸ್ಯರಾಗಿ ಚುನಾಯಿತಗೊಂಡರು.

1978ರಲ್ಲಿ ವಾರಾಣಸಿಯಲ್ಲಿ ನಡೆದ ಅಖಿಲ ಭಾರತ ಕಿಸಾನ್ ಸಭಾದ ಸಮ್ಮೇಳನದಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದ ಇವರು ರಾಜ್ಯದಲ್ಲಿ ಕಳೆಗುಂದಿದ್ದ ರೈತ ಸಂಘಟನೆಗೆ ನವಚೈತನ್ಯ ನೀಡುವಲ್ಲಿ ಪ್ರಮುಖ ಪಾತ್ರ ವಹಿಸಿದರು. 1979ರ ಏಪ್ರಿಲ್‌ನಲ್ಲಿ ಮಂಗಳೂರಿನಲ್ಲಿ ಜರುಗಿದ ಕರ್ನಾಟಕ ಪ್ರಾಂತ ರೈತ ಸಂಘದ 6ನೆಯ ರಾಜ್ಯ ಸಮ್ಮೇಳನದಲ್ಲಿ ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದರು. 1982, ಮಾರ್ಚ್‌ನಲ್ಲಿ ಮುಳುಬಾಗಿಲುನಲ್ಲಿ ನಡೆದ ಸಮ್ಮೇಳನದಲ್ಲಿ ಪ್ರಾಂತ ರೈತ ಸಂಘದ ಅಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ.

ಕರ್ನಾಟಕದಲ್ಲಿ ರೈತ ಹೋರಾಟಕ್ಕೆ ಹೊಸರಕ್ತ ತುಂಬುವಲ್ಲಿ, ರೈತ ಕೂಲಿಕಾರರ ಹೋರಾಟ ಬೆಳೆಸುವಲ್ಲಿ ರೈತ-ಕಾರ್ಮಿಕರ ಸಖ್ಯತೆಯನ್ನು ಬಲಿಷ್ಠಗೊಳಿಸುವಲ್ಲಿ ಉತ್ಸಾಹಪೂರ್ಣವಾಗಿ ದುಡಿಯುತ್ತಿರುವ ಕಾಂ| ರಾಮಚಂದ್ರ ರಾವ್ ಅವರದು ತತ್ತ್ವ ರಾಜಕೀಯದಲ್ಲಿ ನಿಷ್ಠೆಯಿಟ್ಟು ಅವಿಶ್ರಾಂತವಾಗಿ ದುಡಿಯುತ್ತಿರುವ, ಆತ್ಮೀಯತೆಯೊಂದಿಗೆ ಶಿಸ್ತನ್ನೂ ಮೈಗೂಡಿಸಿಕೊಂಡಿರುವ ವಿಶಿಷ್ಟ ವ್ಯಕ್ತಿತ್ವ.

ಈಗ ಇವರು ದಕ್ಷಿಣ ಕನ್ನಡದ ಉಳ್ಳಾಲ ಕ್ಷೇತ್ರದಿಂದ ಸಿ.ಪಿ.ಐ. (ಎಂ) ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿದ್ದಾರೆ.

o

ಕಾಂ| ಎ.ವಿ. ಅಪ್ಪಾಸ್ವಾಮಿ ರೆಡ್ಡಿ

ಕಾಂ| ಎ.ವಿ.ಎ. ಎಂದು ಕೋಲಾರ, ಬಾಗೇಪಲ್ಲಿ ಪ್ರದೇಶಗಳಲ್ಲಿ ಜನಪ್ರಿಯರಾಗಿರುವ ಕಾಂ| ಅಪ್ಪಾಸ್ವಾಮಿರೆಡ್ಡಿಯವರು ಕಳೆದ ಮುವ್ವತ್ತು ವರ್ಷಗಳಿಂದ ಅಲ್ಲಿನ ಜನಸಾಮಾನ್ಯರ ನಡುವೆ ಪ್ರಾಮಾಣಿಕವಾಗಿ ದುಡಿಯುತ್ತಿದ್ದಾರೆ. ಕೋಲಾರ ಜಿಲ್ಲೆಯಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ಸ್ಥಾಪಿಸಿ, ಬೆಳೆಸುತ್ತಿರುವ



ಚಟುವಟಿಕೆಯ ವ್ಯಕ್ತಿಯಾಗಿರುವ ಕಾಂ| ಅಪ್ಪಾಸ್ವಾಮಿರೆಡ್ಡಿಯವರದು ಅವಿಶ್ರಾಂತ ದುಡಿಮೆ. ರೈತರ, ಕೃಷಿ ಕೂಲಿಕಾರರ ಬದುಕಿನಲ್ಲಿ ಬೆರೆತು, ಅವರ ಸಮಸ್ಯೆಗಳನ್ನರಿತು ಅವರಿಗಾಗಿ ಶ್ರಮಿಸುತ್ತಿರುವ ರೆಡ್ಡಿಯವರು ಸ್ವಾತಂತ್ರ್ಯ ಸಂಗ್ರಾಮ ಕಾಲದಲ್ಲಿ ತಮ್ಮ ತಂದೆಯವರೊಡಗೂಡಿ ನಿಷ್ಠಾವಂತ ಕಾಂಗ್ರೆಸ್ ಕಾರ್ಯಕರ್ತರಾಗಿ ಹೋರಾಟ ನಡೆಸಿ ವರ್ಷಗಟ್ಟಲೆ ಜೈಲುವಾಸ ಅನುಭವಿಸಿದವರು.

ಸ್ವಾತಂತ್ರ್ಯನಂತರ ಅಧಿಕಾರ ವಹಿಸಿಕೊಂಡ ಕಾಂಗ್ರೆಸ್ ಸರ್ಕಾರ ರೈತ ಕಾರ್ಮಿಕರ ಹಿತವನ್ನು ಕಡೆಗಣಿಸಿ ಬಂಡವಾಳಶಾಹಿಗಳ ಪರವಾಗಿ ನಿಂತಾಗ ಕಮ್ಯುನಿಸ್ಟ್ ಚಳುವಳಿಯೊಂದೇ ಸಮಸ್ಯೆಗಳಿಗಿರುವ ಪರಿಹಾರ ಎಂಬುದನ್ನು ಕೃಷಿ ಕೂಲಿಕಾರರ, ರೈತರ ಮಧ್ಯಮ ವರ್ಗದ ಜನತೆಯ ನಡುವೆ ಜಾಗೃತಗೊಳಿಸಿ ಹೋರಾಟಗಳನ್ನು ಪ್ರಾರಂಭಿಸಿದವರು ಕಾಂ| ರೆಡ್ಡಿಯವರು. ಜಿಲ್ಲೆಯಲ್ಲಿ ರೈತ ಸಂಘವನ್ನು ಸ್ಥಾಪಿಸಿ, ಜೋಡಿ ಇನಾಂ ರದ್ದತಿಗಾಗಿ ಚಳುವಳಿ ನಡೆಸಿ, ಭೂಹೀನರಿಗಾಗಿ ನಡೆದ ಭೂಗ್ರಹಣ ಚಳುವಳಿಯನ್ನು ಸಂಘಟಿಸಿದರು.

ಇತ್ತೀಚೆಗೆ ರಾಜ್ಯದಲ್ಲಿ ನಡೆದ ರೈತರ ಬೃಹತ್ ಹೋರಾಟದಲ್ಲಿ ಬಾಗೇಪಲ್ಲಿ ರೈತರನ್ನು ಮುಖ್ಯ ಪ್ರವಾಹದೊಡನೆ ಒಂದುಗೂಡಿಸಲು ಶ್ರಮಿಸಿದವರಲ್ಲಿ ರೆಡ್ಡಿಯವರು ಪ್ರಮುಖರು.


1964ರಲ್ಲಿ ಪರಿಷ್ಕರಣವಾದಿಗಳಿಂದ ಪ್ರತ್ಯೇಕಗೊಂಡು ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಾರ್ಟಿಗೆ ಸೇರಿ ರೈತ ಸಂಘಟನೆಯನ್ನು ಮುಂದುವರಿಸಿದರು. ಸಿ. ಪಿ. ಐ. [ಎಂ] ನ ನಿಷ್ಠಾವಂತ ಮುಖಂಡರಾಗಿ ಉಳಿದಿರುವ ಕಾಂ| ರೆಡ್ಡಿಯವರು ಈಗ ಕೋಲಾರ ಜಿಲ್ಲೆಯ ರೈತ ಸಂಘಟನೆಯ ಹಾಗೂ ಪಕ್ಷದ ಮುಖಂಡರಾಗಿದ್ದಾರೆ.

ಈಗ ಕಾಂ| ಅಪ್ಪಾಸ್ವಾಮಿರೆಡ್ಡಿಯವರು ಸಿ. ಪಿ. ಐ. [ಎಂ] ಅಭ್ಯರ್ಥಿಯಾಗಿ ಬಾಗೇಪಲ್ಲಿ ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದಾರೆ.

o

ಕಾಂ| ಟಿ. ಎಸ್ ಮಣಿ

1939ರಲ್ಲಿ ಕೆ. ಜಿ. ಎಫ್. ನಲ್ಲಿ ಹುಟ್ಟಿದ ಕಾಂ| ಮಣಿಯವರದು ಶ್ರಮಜೀವಿ ಕುಟುಂಬ. ಮಣಿಯವರ ತಂದೆ ಚಿನ್ನದ ಗಣಿಯ ಕಾರ್ಮಿಕರಾಗಿ 1940-42ರ ಸುಮಾರಿನಲ್ಲಿ ಟ್ರೇಡ್ ಯೂನಿಯನ್ ಹಕ್ಕುಗಳಿಗಾಗಿ ಗಣಿ ಕಾರ್ಮಿಕರನ್ನು ಸಂಘಟಿಸಿದವರು. ಗಣಿಯಲ್ಲಿ ಮುಷ್ಕರ ನಡೆಸಿದರೆಂಬ ಕಾರಣಕ್ಕಾಗಿ ಆಗಿನ ಬ್ರಿಟೀಷ್ ಸರ್ಕಾರ ಮಣಿ




ಯವರ ತಂದೆ ಹಾಗೂ ಅಣ್ಣನನ್ನು 1948ರ ಒಂದು ರಾತ್ರಿ ಕುಟುಂಬ ಸಮೇತ ಪೋಲೀಸ್ ವ್ಯಾನಿನಲ್ಲಿ ಕೊಂಡು ಹೋಗಿ ಆಂಧ್ರದ ಗಡಿಯಾಚೆ ಗಡೀಪಾರು ಮಾಡಿತು. ನಂತರ ಮಣಿಯವರ ಕುಟುಂಬ ತಮ್ಮ ಸ್ವಂತ ಗ್ರಾಮದಲ್ಲಿ ನೆಲೆಸಿತು.

1952ರಲ್ಲಿ ಕೆ.ಜಿ.ಎಫ್.ಗೆ ಬಂದ ಕಾಂ| ಟಿ. ಎಸ್. ಮಣಿಯವರು ಟ್ರೇಡ್ ಯೂನಿಯನ್ ಚಳುವಳಿಯಲ್ಲಿ ಕೆಲಸ ಮಾಡತೊಡಗಿದರು. 1955 ರಲ್ಲಿ ಗಣಿ ಕಾರ್ಮಿಕರಾಗಿ ಕೆಲಸಕ್ಕೆ ಸೇರಿದ ಮಣಿಯವರು ಕಾರ್ಮಿಕ ಸಂಘಟನೆ ಮತ್ತು ಕಮ್ಯುನಿಸ್ಟ್ ಪಕ್ಷದೊಡನೆ ಸಂಪರ್ಕ ಪಡೆದರು

1964ರಲ್ಲಿ ಪಕ್ಷ ಒಡೆದ ನಂತರ ಕಾಂ| ಮಣಿಯವರು ಅಲ್ಲಿನ ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ ಶಾಖೆಯ ಕಾರ್ಯದರ್ಶಿಯಾಗಿ ಪಕ್ಷವನ್ನು ಕಟ್ಟುವ ಜವಾಬ್ದಾರಿಯನ್ನು ವಹಿಸಿಕೊಂಡರು. 1968ರಲ್ಲಿ ಪಕ್ಷದ ಆದೇಶದ ಪ್ರಕಾರ ತಮ್ಮ ಉದ್ಯೋಗಕ್ಕೆ ರಾಜೀನಾಮೆ ನೀಡಿ ಪಕ್ಷದ ಪೂರ್ಣಕಾಲದ ಕಾರ್ಯಕರ್ತರಾದರು

ಕೆ. ಜಿ. ಎಫ್. ನಲ್ಲಿ ಒಂದು ಸಣ್ಣ ಶಕ್ತಿಯಾಗಿದ್ದ ನಮ್ಮ ಕಾರ್ಮಿಕ ಸಂಘವು ಇಂದು ಹದಿಮೂರು ಸಾವಿರ ಕಾರ್ಮಿಕರನ್ನು ಪ್ರತಿನಿಧಿಸುವಂತಹ

(6ನೇ ಪುಟ ನೋಡಿ)



ಕಾಂ| ಸೂರ್ಯನಾರಾಯಣರಾವ್

1924ರ ಆಗಸ್ಟ್ 24 ರಂದು ಹಾಸನ ಜಿಲ್ಲೆಯ ಅರಕಲಗೂಡಿನಲ್ಲಿ ಹುಟ್ಟಿದ ಕಾಂ| ಸೂರಿಯವರದು ಮಧ್ಯಮ ವರ್ಗದ ಕುಟುಂಬ.

ವಿದ್ಯಾರ್ಥಿ ದೆಸೆಯಲ್ಲಿದ್ದಾಗಲೇ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಅನೇಕ ಬಾರಿ ಸೆರೆಮನೆವಾಸ ಅನುಭವಿಸಿದವರು ಕಾಂ. ಸೂರಿಯವರು

1946ರಲ್ಲಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಓದುತ್ತಿದ್ದಾಗ ಬ್ರಿಟೀಷ್ ಪ್ರಭುತ್ವದ ವಿರುದ್ಧ ಪ್ರತಿಭಟಿಸಿದ್ದಕ್ಕಾಗಿ ಅವರನ್ನು ಕಾಲೇಜಿನಿಂದ ಹೊರಹಾಕಲಾಗಿತ್ತು.

1948ರಲ್ಲಿ ಮಹಾತ್ಮ ಗಾಂಧಿಯವರು ಮೃತರಾದಾಗ ಸಂತಾಪ ಸೂಚಕ ಸಭೆಯ ಅಧ್ಯಕ್ಷತೆಯನ್ನು ಮೈಸೂರು ಮಹಾರಾಜರು ವಹಿಸುವುದನ್ನು ವಿರೋಧಿಸಿದ್ದಕ್ಕಾಗಿ ಮೂರು ತಿಂಗಳುಗಳ ಕಾಲ ಅವರನ್ನು ಸ್ಥಾನಬದ್ಧತೆಯಲ್ಲಿಡಲಾಗಿತ್ತು ಆಗ ಸೂರಿಯವರು ಅಖಿಲ ಭಾರತ ವಿದ್ಯಾರ್ಥಿ ಫೆಡರೇಶನ್ನಿನ ಹಳೆ ಮೈಸೂರು ಸಂಸ್ಥಾನದ ಪ್ರಧಾನ ಕಾರ್ಯದರ್ಶಿಯಾಗಿದ್ದರು.

1945 ರಿಂದ 48ರವರೆಗೆ ವಿದ್ಯಾರ್ಥಿ ಹಾಸ್ಟೆಲ್ ನಡೆಸುತ್ತಿದ್ದ 'ಸ್ಟೂಡೆಂಟ್ ಏಡ್ ಸೊಸೈಟಿ'ಯ ಕಾರ್ಯದರ್ಶಿಯಾಗಿದ್ದರು.

ಕಾಂ| ಸೂರಿಯವರು ಸ್ವಲ್ಪ ಕಾಲ ಎಚ್.ಎ.ಎಲ್. ನಲ್ಲಿ ಕೆಲಸ ಮಾಡುತ್ತಿದ್ದರು.

1947ರಲ್ಲಿ ಕಮ್ಯುನಿಸ್ಟ್ ಪಕ್ಷದ ಸದಸ್ಯತ್ವ ಪಡೆದ ನಂತರ 1952ರಲ್ಲಿ

(6ನೇ ಪುಟ ನೋಡಿ)

ಬೋಗಸ್ ಆಶ್ವಾಸನೆಗಳ ಸರಮಾಲೆ

ಇಂದಿರಾ ಕಾಂಗ್ರೆಸ್ಸಿನ ಚುನಾವಣಾ ಘೋಷಣೆ

—ಎನ್ಕೆ

ಬಲಿಷ್ಠವಾದ ಕೇಂದ್ರಕ್ಕೆ ಓಟುಕೊಡಬೇಕೆಂದೂ, ಪ್ರಾದೇಶಿಕ-ಶಕ್ತಿಗಳನ್ನು ಸೋಲಿಸಬೇಕೆಂದು, ಕರ್ನಾಟಕ, ಆಂಧ್ರ ಮತ್ತು ತ್ರಿಪುರದ ಮತದಾರರಿಗೆ ಇಂದಿರಾ ಕಾಂಗ್ರೆಸ್ಸಿನ ಚುನಾವಣಾ ಘೋಷಣೆಯಲ್ಲಿ ಕರೆ ಕೊಡಲಾಗಿದೆ. 1985ರೊಳಗೆ 20 ಕೋಟಿ ಜನರಿಗೆ ಉದ್ಯೋಗ ಒದಗಿಸಲಾಗುವುದೆಂದೂ ಆಶ್ವಾಸನೆ ನೀಡಲಾಗಿದೆ. ಶುದ್ಧ ಸಂದರ್ಭವಾದಕ್ಕಾಗಿ ಮತ್ತು ಸಂಪೂರ್ಣ ನಕಾರಾತ್ಮಕ ತಿಳುವಳಿಕೆಗಾಗಿ ವಿರೋಧ ಪಕ್ಷಗಳನ್ನು ಬಲವಾಗಿ ಖಂಡಿಸಿ "ಇಂಥ ತತ್ವವಿಲ್ಲದ ಒಕ್ಕೂಟಗಳು ಪ್ರಜಾಪ್ರಭುತ್ವಕ್ಕೆ ನಿಜವಾದ ಅಪಾಯವನ್ನೊಡ್ಡುತ್ತಿವೆ; ಯಾಕೆಂದರೆ, ಅವು ವಿಚ್ಛಿದ್ರಕಾರಿ ಮತ್ತು ಪೂರ್ಣವಲ್ಲದ ನಿಲುವುಗಳನ್ನು ಪ್ರೋತ್ಸಾಹಿಸುತ್ತಿವೆ" ಎಂದೂ ಹೇಳಿದೆ. "ಇಂದಿರಾ ಗಾಂಧಿಯ ವಿರುದ್ಧ ಪ್ರಚಾರ ಮಾಡಿ, ಲೋಕಸಭೆಯಿಂದ ಆಕೆಯನ್ನು ತಮ್ಮ ನಿಶ್ಚಳ ಬಹುಮತದಿಂದ ಹೊರಗೆ ಹಾಕಿದವರು ಪ್ರಜಾಪ್ರಭುತ್ವದ ಕುರಿತು ಮಾತಾಡುತ್ತಿದ್ದಾರೆಂದು" ಆಗಿನ ಜನತಾ ಪಕ್ಷದ ಆಡಳಿತೆಯನ್ನು ಹೀನಾಯವಾಗಿ ಟೀಕಿಸಿ "ಭಾರತದಲ್ಲಿ ಪ್ರಜಾಪ್ರಭುತ್ವವನ್ನು ಕಾರ್ಯರೂಪದಲ್ಲಿ ತಂದಿರುವ ಯೋಗ್ಯತೆ ನಮ್ಮ ಮುಖಂಡರನ್ನು ಕೀಳಾಗಿ ನೋಡಿರುವವರಿಗೆಲ್ಲ ಭಾರತದ ರಾಷ್ಟ್ರೀಯ ಕಾಂಗ್ರೆಸ್ಸಿನ ಪರಿಶ್ರಮಕ್ಕೆ ಸಲ್ಲುತ್ತದೆ" ಎಂದು ಆತ್ಮ ಪ್ರಶಂಸೆ ಮಾಡಿಕೊಳ್ಳಲಾಗಿದೆ. "ಕಾಂಗ್ರೆಸ್ ಪಕ್ಷ ಮಾತ್ರ ರಾಷ್ಟ್ರದ ನಿಷ್ಠೆಯನ್ನು ಭದ್ರವಾಗಿ ಉಳಿಸುವುದರಿಂದ ಬಲಿಷ್ಠವಾದ ಕೇಂದ್ರ ಇರಬೇಕೆಂದು ಅದು ಪ್ರತಿಪಾದಿಸುತ್ತದೆ. ರಾಷ್ಟ್ರದ ಆರ್ಥಿಕ ಬೆಳವಣಿಗೆಯಿಂದಲೇ ಪ್ರಾದೇಶಿಕ ಬೆಳವಣಿಗೆಯೂ ಸಾಧ್ಯ. ಜನರ ಮೂಲಭೂತ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯಲಿಕ್ಕೆ ಪ್ರಾದೇಶಿಕವಾದವು ರಾಜಕೀಯ ಕ್ರಮವಾಗಿ ಯಾವ ಅರ್ಥಪೂರ್ಣವಾದ ಪರಿಹಾರವನ್ನು ತೋರಿಸಲು ಸಾಧ್ಯವಿಲ್ಲ." ಎಂದು ಘೋಷಣೆ ಹೇಳುತ್ತದೆ.

ಚುನಾವಣೆಯ ಘೋಷಣೆಯಲ್ಲಿ ಮತ್ತೂ ಹೇಳಿದ್ದೇನೆಂದರೆ,—
"ಭಾರತ ದೇಶದ ಚರಿತ್ರೆಯಲ್ಲಿ ಈಗಿರುವಷ್ಟು ಉತ್ತಮ ಅವಕಾಶ ಹಿಂದುಳಿದ, ನಿಮ್ನ ವರ್ಗದ ಜನಾಂಗದವರಿಗೆ ಹಿಂದೆಂದೂ ಇರಲಿಲ್ಲ, ಕಾಂಗ್ರೆಸ್ ಸರಕಾರ ಮಹಿಳೆಯರ ಸಮಸ್ಯೆಗಳಿಗೆ ವಿಶೇಷ ಗಮನಕೊಟ್ಟು ಅವರ ಪರಿಸ್ಥಿತಿ ಸುಧಾರಿಸಲು ಕ್ರಮಕೈಗೊಂಡಿದೆ, ರೈತರು ತಮ್ಮ ಬೆಳೆಗಳಿಗೆ ನ್ಯಾಯ ಬೆಲೆ ಪಡೆದಿದ್ದಾರೆ, ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಬಳಕೆಗಾರರನ್ನು ಬೆಲೆ ಹೆಚ್ಚಳದಿಂದ ರಕ್ಷಿಸಲಾಗಿದೆ.

1980ರ ಲೋಕಸಭೆ ಚುನಾವಣೆಯಲ್ಲಿ ಇಂದಿರಾ ಕಾಂಗ್ರೆಸ್ಸಿಗೆ ಎರಡು ಮೂರಂಶಕ್ಕಿಂತಲೂ ಹೆಚ್ಚಿನ ಬಹುಮತ ಪಾರ್ಲಿಮೆಂಟಿನಲ್ಲಿ ಸಿಕ್ಕಿತ್ತು. ಕೇಂದ್ರದಲ್ಲಿ ಬಲಿಷ್ಠ ಸರಕಾರ ಇರಬೇಕೆಂದು ರಾಜ್ಯ ಸಭೆಗಳ ವಿಧಾನಸಭೆ ಚುನಾವಣೆಗಳಲ್ಲಿ ಮತದಾರರಿಗೆ ವಿನಂತಿ ಮಾಡಿಕೊಳ್ಳುತ್ತಿರುವ ಇಂದಿರಾ ಗಾಂಧಿಯವರು ಕಳೆದ ಮೂರು ವರ್ಷಗಳಲ್ಲಿ ತನ್ನ ಬಲಿಷ್ಠವಾದ ಕೇಂದ್ರ, ದೇಶದ ಜನತೆ, ರಾಜ್ಯ ಸರಕಾರಗಳು ಎದುರಿಸುತ್ತಿರುವ ಸಮಸ್ಯೆಗಳಿಗೆ ಏನು ಪರಿಹಾರ ಕೊಡಿಸಿದೆಂಬುದನ್ನು ಹೇಳಿಲ್ಲ.

ರೈತರು ಕಷ್ಟದಿಂದ ಬೆಳೆಯುತ್ತಿರುವ ಬೆಳೆಗಳಿಗೆ ನ್ಯಾಯ ಬೆಲೆ ಕೊಡಿಸಿದ್ದೇವೆಂದು ಕಾಂಗ್ರೆ ಚುನಾವಣಾ ಘೋಷಣೆಯಲ್ಲಿ ಹೇಳಲಾಗಿದೆ. ಆದರೆ ಕರ್ನಾಟಕ, ಮಹಾರಾಷ್ಟ್ರ, ಪಂಜಾಬ್, ತಮಿಳುನಾಡು ಮುಂತಾದ ರಾಜ್ಯಗಳಲ್ಲಿ ಕಳೆದ ಮೂರು ವರ್ಷಗಳಿಂದ ರೈತರ ಚಳುವಳಿ ಒಂದೇ ಸಮನೆ ನಡೆಯುತ್ತಲೇ ಇದೆ. ತಮ್ಮ ಹೊಲ-ತೋಟಗಳಲ್ಲಿ ಉತ್ಪಾದಿಸುವ ಉತ್ಪನ್ನಗಳಿಗೆ, ಬೆಳೆಗಳಿಗೆ ಯೋಗ್ಯ ಬೆಲೆ ಸಿಗಬೇಕೆಂದು ಅವರ ಚಳುವಳಿಯಾಗಿದೆ. ರಸಾಯನಿಕ ಗೊಬ್ಬರ, ಕಬ್ಬಿಣ ಮೊದಲಾದ ವಸ್ತುಗಳ ಬೆಲೆ ಹೆಚ್ಚಾಗಿರುವುದರಿಂದ ವ್ಯವಸಾಯ ಉದ್ಯೋಗ ಆರ್ಥಿಕವಾಗಿ ಲಾಭದಾಯಕವಾಗುತ್ತಿಲ್ಲ, ಕಾರಣ ನ್ಯಾಯ ಬೆಲೆ ಸಿಗಬೇಕು; ಹಾಗೆಯೇ ಸಗಟು ವ್ಯಾಪಾರಸ್ಥರು, ವಕ್ಕಲತನ ಹುಟ್ಟುವಳಿ ಮಾರಾಟ ಮಳಿಗೆಗಳಿಂದ ರೈತರಿಗಾಗುವ ನಷ್ಟವನ್ನು ತಪ್ಪಿಸಬೇಕೆಂದು ಚಳುವಳಿ ನಡೆಯುತ್ತಿವೆ. ಕಬ್ಬು, ಗೋಧಿ, ಅಕ್ಕಿಯ ಬೆಲೆಯನ್ನು ಕೇಂದ್ರ ಸರಕಾರ ನಿರ್ಧರಿಸುತ್ತಿದ್ದು, ರೈತರು ತಾವು ಮಾಡುವ ಖರ್ಚಿಗೆ ಹೊಂದಿಕೊಂಡು ಬೆಲೆ ನಿರ್ಧಾರವಾಗುತ್ತಿಲ್ಲೆಂದೂ ಅವರ ತಕರಾರಾಗಿರುತ್ತದೆ. ಇವುಗಳಿಗೆಲ್ಲ ಇಂದಿರಾ ಸರಕಾರದ ಪರಿಹಾರವನ್ನು ಕಂಡಿದ್ದೇವೆ. ಇಂದಿರಾ ರಾಜ್ಯ ಸರಕಾರಗಳು ಗೋಳಿಬಾರು ಮಾಡಿ, ಲಾಠಿ ಚಾರ್ಜ ಮಾಡಿ, ರೈತರನ್ನೆಲ್ಲ ಬಂಧಿಸಿ ರೈತರ ಸಮಸ್ಯೆಗಳಿಗೆ ಪರಿಹಾರ ತೋರಿಸಿದೆ. ಕರ್ನಾಟಕ ಒಂದೇ ರಾಜ್ಯದಲ್ಲಿ ನೂರೈವತ್ತಕ್ಕಿಂತಲೂ ಹೆಚ್ಚು ರೈತರನ್ನು ಪೋಲೀಸರ ಗುಂಡೇಟಿನಿಂದ ಕೊಲ್ಲಲಾಗಿದೆ. ಇಂದಿರಾ ಕಾಂಗ್ರೆಸ್ ಆಡಳಿತೆಯಲ್ಲಿ ರೈತರಿಗೆ ದೊರಕಿರುವ ನ್ಯಾಯ ಬೆಲೆ ಇದೇ ಅಲ್ಲವೇ ? ರೈತರ ರಕ್ತ ಇನ್ನೂ ಹೆಚ್ಚಿಗೆ ಸುರಿಸುವ ಸಲುವಾಗಿ ಇಂದಿರಾ ಕಾಂಗ್ರೆಸ್ಸಿಗೆ ಮತ ಹಾಕಬೇಕಲ್ಲವೇ ?

ಸಾರ್ವಜನಿಕ ವಿತರಣಾ ವ್ಯವಸ್ಥೆಗಳ ಮೂಲಕ ಆಹಾರ ಧಾನ್ಯ ಜನರಿಗೆಲ್ಲ ಪೂರೈಸಿ, ಬೆಲೆಯೇರಿಕೆಯನ್ನು ತಡೆಗಟ್ಟಲಾಗಿದೆಯೆಂದು ಹುಸಿ ಸುಳ್ಳನ್ನೇ ಇಂದಿರಾ ಚುನಾವಣೆ ಘೋಷಣೆ ಸಾರುತ್ತದೆ. 1980ರಲ್ಲಿ ಇಂದಿರಾ ಗಾಂಧಿ ಅಧಿಕಾರಕ್ಕೆ ಬಂದಾಗ, ಸಕ್ಕರೆ, ಎಣ್ಣೆ, ಗೋಧಿ, ಅಕ್ಕಿ, ಜೋಳ, ಬೇಳೆ ಹಾಗೆಯೇ ಇತರ ಅವಶ್ಯಕ ವಸ್ತುಗಳ ಬೆಲೆ ಎಷ್ಟಿತ್ತು, ಈಗ ಎಷ್ಟು ಪಾಲು ಹೆಚ್ಚಾಗಿದೆ, ಮತದಾರರೆಲ್ಲ ತಮ್ಮ ಅನುಭವದಿಂದಲೇ ಬೆಲೆಯೇರಿಕೆಯ ಬವಣೆಯಲ್ಲಿ ಬೆಂದಿರುವುದರಿಂದ, ಮುಖ್ಯವಾಗಿ ಗೃಹಿಣಿಯರು ತಮ್ಮ ಮನೆ-ಸಂಸಾರವನ್ನು ತೂಗಿಸಿಕೊಂಡು ಹೋಗುವಾಗ ಕಣ್ಣೀರು ಸುರಿಸುತ್ತ ಇಂದಿರಾ ಗಾಂಧಿ ಸರಕಾರದ ಬೆಲೆಯೇರಿಕೆಯನ್ನು ತಡೆಗಟ್ಟಿರುವ ಕ್ರಮದ ನೇರ ಅನುಭವವನ್ನು ಉಣ್ಣುತ್ತಿದ್ದಾರೆ. ಚಿಕ್ಕ ಮಕ್ಕಳನ್ನು ಬಾಲವಾಡಿಗೆ ಕಳುಹಿಸುವುದರಿಂದ ಹಿಡಿದು ಉಚ್ಚಮಟ್ಟದ ಶಿಕ್ಷಣದವರೆಗೆ ಅವರ ವಿದ್ಯಾಭ್ಯಾಸದ, ಬಟ್ಟೆ ಬರೆಗಳ, ಪುಸ್ತಕಗಳ ಖರ್ಚನ್ನು ತೂಗಿಸಿಕೊಂಡು ಹೋಗುತ್ತಿರುವುದನ್ನು ಬಹುಶಃ ಇಂದಿರಾ ಗಾಂಧಿಯಾಗಲೀ ಅವರ ಚೇಲಗಳಾಗಲಿ ಅನುಭವಿಸಿಕೊಂಡಂತೆ ಕಂಡು ಬರುವುದಿಲ್ಲ. ಅದರಂತೆಯೇ ಸಗಟು ವ್ಯಾಪಾರಿಗಳು ದಿನ ಬೆಳಗಾದರೆ ಬೆಲೆ ಪಟ್ಟಿಯನ್ನು ತಿದ್ದುತ್ತ, ಅಳತೆ, ತೂಕಗಳಲ್ಲಿ ಜನರನ್ನು ಶೋಷಣೆ ಮಾಡುತ್ತಿರುವ ಅರಿವೂ ಇಂದಿರಾ ಗಾಂಧಿಗೂ, ಅವರ ಪಕ್ಷದ ಮಂತ್ರಿಗಳಿಗೂ ಇದ್ದಂತೆ ತೋರುವುದಿಲ್ಲ. ಕಲ್ಲು, ಮಣ್ಣು, ಕಬ್ಬಿಣದ ಚೂರು ಹಾಗೆಯೇ ನಾನಾ ತರದ ಕಸಕಡ್ಡಿಗಳಿಂದ ತುಂಬಿರುವ ಜೋಳ, ಗೋಧಿ, ಅಕ್ಕಿ (ಅತ್ಯಂತ ಕೆಳಮಟ್ಟದ)ಗಳನ್ನು ಸರಕಾರ ಗೋದಾಮುಗಳಿಂದ ಅಗ್ಗದರರ ಅಂಗಡಿಗಳಿಗೆ ಒದಗಿಸಿ, ಜನರಿಗೆ ಮೋಸ ಮಾಡುವ ದಾರುಣ ದೃಶ್ಯವನ್ನೂ ನೋಡಲಿಕ್ಕೆ ಇಂದಿರಾ ಗಾಂಧಿಗೆ ಕಣ್ಣಿದ್ದಂತೆ ಕಂಡು ಬರುವುದಿಲ್ಲ. ಆದ್ದರಿಂದ ಸುಳ್ಳಿನ ಕಂತೆಯನ್ನೇ ಘೋಷಣೆ ಮೂಲಕ ಜನರ ಮುಂದಿಟ್ಟಿದ್ದಾರೆ.

ಪ್ರಾದೇಶಿಕ ಮತ್ತು ಛಿದ್ರಕಾರಿ ಶಕ್ತಿಗಳೊಡನೆ ಕಮ್ಯುನಿಸ್ಟ್ ಪಾರ್ಟಿಗಳೂ, ವಿರೋಧ ಪಕ್ಷಗಳೂ ಸೇರಿಕೊಂಡಿವೆಯೆಂದೂ, ಇಂದಿರಾ ಪಕ್ಷದ ಚುನಾವಣೆಯ ಘೋಷಣೆ ಆರೋಪಿಸುತ್ತಿರುವಾಗ, ಕೇರಳದಲ್ಲಿ ಮುಸ್ಲಿಂ ಲೀಗಿನ ಜೊತೆ ಸೇರಿ ಅಲ್ಲಿ ಸರಕಾರ ರಚಿಸಿದ್ದನ್ನಾಗಲೀ, ತಮಿಳ್ನಾಡುನಲ್ಲಿ ಪ್ರಾದೇಶಿಕ ಪಕ್ಷವಾದ ಡಿ.ಎಂ.ಕೆ. ಜೊತೆಗೆ ಸಲ್ಲಾಪ ನಡೆಸಿದ್ದನ್ನಾಗಲೀ, ನಾಗಾಲ್ಯಾಂಡಿನಲ್ಲಿ ಮೊನ್ನೆ ನಡೆದ ಚುನಾವಣೆಯ ನಂತರ ಬಂಡುಖೋರ 8 ಶಾಸಕರಿಗೂ ಮಂತ್ರಿಸ್ಥಾನ ಕೊಡಿಸಿದ ವಿಷಯವನ್ನಾಗಲೀ, ಈಗ ನಡೆಯುತ್ತಿರುವ ಚುನಾವಣೆಯಲ್ಲಿ ತ್ರಿಪುರದ ಛಿದ್ರಕಾರಿ, ಪ್ರಾಂತೀಯ ಪಕ್ಷವಾದ ತ್ರಿಪುರಾ ಉಪಜಾತಿ ಸುಬಾ ಸಮಿತಿ ಜೊತೆಯಲ್ಲಿ ಚುನಾವಣಾ ಒಪ್ಪಂದ ಮಾಡಿಕೊಂಡಿರುವ ವಿಷಯಗಳನ್ನು ಪ್ರಸ್ತಾಪಿಸದಿರುವುದು ಆಶ್ಚರ್ಯಕರವಲ್ಲದೆ ? ಚುನಾವಣಾ ಘೋಷಣೆಯನ್ನು ಪತ್ರಿಕಾಕರ್ತರಿಗೆ ಬಿಡುಗಡೆ ಮಾಡಿದಾಗ, ಒಬ್ಬ ಪತ್ರಿಕಾಕರ್ತ ತ್ರಿಪುರಾದಲ್ಲಿ ಇಂದಿರಾ ಪಕ್ಷ ತ್ರಿಪುರಾ ಉಪಜಾತಿ ಸುಬಾ ಸಮಿತಿ ಜೊತೆಯಲ್ಲಿ ಒಪ್ಪಂದ ಮಾಡಿಕೊಂಡಿರುವುದು ತಪ್ಪಲ್ಲವೇ ಎಂದು ಕೇಳಿದಾಗ, ಕಾಂಗ್ರೆಸ್ ಕಾರ್ಯದರ್ಶಿಯವರು ಜವಾಬುಕೊಡದೆ ಮೌನವಾಗಿದ್ದರು. ಅಧಿಕಾರ ಪಡೆಯುವ ಸಲುವಾಗಿ ಇಂದಿರಾ ಗಾಂಧಿ ಹರಿಯಾಣ, ನಾಗಾಲ್ಯಾಂಡ್, ತಮಿಳುನಾಡು, ಕೇರಳ ಹಾಗೆಯೇ ಇತರ ರಾಜ್ಯಗಳಲ್ಲಿ ಕೂಡ, ಮತೀಯ, ಪ್ರಾದೇಶಿಕ ಹಾಗೆಯೇ ಛಿದ್ರಕಾರಿ ಪಕ್ಷ, ಗುಂಪು, ಶಕ್ತಿಗಳೊಡನೆ ಸಂಬಂಧ ಬೆಳೆಸಿಕೊಳ್ಳಲು ನಾಚುವುದಿಲ್ಲೆಂಬುದು ಸ್ಪಷ್ಟವಾಗಿದೆ.

ಕೇಂದ್ರದಲ್ಲಿ ಬಲಿಷ್ಠವಾದ ಸರಕಾರ ಬೇಕೆಂದು ಹೇಳಿದ್ದಾರೆ. ಇದರ ಕುರಿತು ಯಾರದೂ ಭಿನ್ನಾಭಿಪ್ರಾಯವಿಲ್ಲ. ಆದರೆ ಕೇಂದ್ರದ ಬಲಿಷ್ಠ ಸರಕಾರ, ರಾಜ್ಯಗಳ ಸ್ವಾಯತ್ತತೆ, ಆದಾಯ, ಅಧಿಕಾರಗಳನ್ನು ಕುಂಠಿತಗೊಳಿಸಲಿಕ್ಕಲ್ಲ. ರಾಜ್ಯಗಳು ತಮ್ಮ ರಾಜ್ಯದ ಜನರ, ಪ್ರದೇಶದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳುವಾಗ ಅಡ್ಡಿ ಉಂಟುಮಾಡುವುದಕ್ಕಲ್ಲ, ರಾಜ್ಯದ ಜನರ ಒಳಿತಿಗಾಗಿ ಶಾಸನ ಸಭೆಗಳಲ್ಲಿ ಮಂಜೂರು ಮಾಡಿ ಕಳುಹಿಸಿಕೊಡುವ ಮಸೂದೆಗಳನ್ನು ತಡೆಹಿಡಿಯಲಿಕ್ಕಲ್ಲ. ವಿದೇಶಿಯರ ದಾಳಿಯಿಂದ ದೇಶದ ಸ್ವಾತಂತ್ರ್ಯವನ್ನು ರಕ್ಷಿಸುವ, ಜವಾಬ್ದಾರಿಯ ಜೊತೆಯಲ್ಲೇ ರಾಜ್ಯಗಳ ಸಮಗ್ರ ಸಮಸ್ಯೆಗಳನ್ನು ತಿಳಿದುಕೊಂಡು ಅವುಗಳ ಪರಿಹಾರಕ್ಕೆ ಸಹಕಾರಿ ಆಗುವುದೂ ಕೇಂದ್ರದ ಜವಾಬ್ದಾರಿಯಾಗಿದೆ. ಕೇಂದ್ರದಲ್ಲಿ ಒಂದು ಪಕ್ಷದ ಸರಕಾರ ಇದ್ದು ರಾಜ್ಯಗಳಲ್ಲಿ ಮತ್ತೊಂದು ಪಕ್ಷದ ಸರಕಾರವಿದ್ದಾಗ, ಯಾವ ತಾರತಮ್ಯವಿಲ್ಲದೆ ಸರಿಯಾಗಿ ನೋಡಿಕೊಳ್ಳುವ ಕೇಂದ್ರ ಸರಕಾರಬೇಕು. ರಾಜ್ಯಗಳು ಬಲಿಷ್ಠವಾಗಿದ್ದರೆ ಮಾತ್ರ ಕೇಂದ್ರ ಬಲಿಷ್ಠವಾಗಿರಲು ಸಾಧ್ಯ. ಇಂದಿರಾ ಗಾಂಧಿಯ ದೃಷ್ಟಿಯಲ್ಲಿ ಬಲಿಷ್ಠ ಕೇಂದ್ರವೆಂದು ಹೇಳುವಾಗ, ಪ್ರತಿಯೊಂದು ರಾಜ್ಯದಲ್ಲೂ ತನ್ನ ಪಕ್ಷದ ಸರಕಾರವೇ ಇರಬೇಕೆಂದು ಹೇಳುತ್ತಿರುವುದು ಪ್ರಜಾಪ್ರಭುತ್ವಕ್ಕೆ ವಿರೋಧವಾಗಿದೆ. ಸರ್ವಾಧಿಕಾರದ ಸ್ಪಷ್ಟ ಲಕ್ಷಣವಾಗಿದೆ ಪಾರ್ಲಿಮೆಂಟರಿ ಪದ್ಧತಿಯನ್ನು ಮುಟ್ಟುಗೋಲು ಹಾಕಿದಂತಾಗಿದೆ.

1980 ರಿಂದಲೇ ಇಂದಿರಾ ಗಾಂಧಿ ಕೇಂದ್ರದಲ್ಲಿ ಬಲಿಷ್ಠವಾದ ಅಧಿಕಾರ ನಡೆಸುತ್ತಿದ್ದಾರೆ. ಎರಡು ಮೂರಂಶಕ್ಕಿಂತಲೂ ಹೆಚ್ಚಿನ ಬಹುಮತ ಲೋಕಸಭೆಯಲ್ಲಿ ಇಂದಿರಾ ಗಾಂಧಿಗೆ ಇದ್ದರೂ ಕೂಡ ತನ್ನ ಮಂತ್ರಿ ಮಂಡಲದಲ್ಲಿ ವಿದೇಶಿ ಖಾತೆಯನ್ನು ತಾನೇ ವಹಿಸಿಕೊಂಡಿದ್ದರು. ರಕ್ಷಣೆ, ಕಾರ್ಮಿಕ ಮಂತ್ರಿಗಳೇ ಇರಲಿಲ್ಲ. ಯಾಕೆ ? ಅನಂತರ ಕಳೆದ ಮೂರು ವರ್ಷಗಳಲ್ಲಿ ಮೂರು-ನಾಲ್ಕು ಸಲ ಮಂತ್ರಿಗಳ ಖಾತೆಗಳನ್ನು ಬದಲಾವಣೆ ಮಾಡಲಾಯಿತು. ಯಾವ ಕಾರಣದಿಂದ ? ಆಂಧ್ರ, ಮಹಾರಾಷ್ಟ್ರಗಳನ್ನೊಳಗೊಂಡು ಹಲವಾರು ತನ್ನ ಪಕ್ಷದ ಮುಖ್ಯ ಮಂತ್ರಿಗಳನ್ನು ಬದಲಾವಣೆ ಮಾಡಲಾಯಿತು. ಆಸ್ಸಾಂನಲ್ಲಿ ಛಿದ್ರಕಾರಿ ಶಕ್ತಿಗಳಿಂದಾಗಿ ಆಡಳಿತೆ ಕುಸಿದು ಬಿದ್ದಿದೆ. ಮಂತ್ರಿ ಮಂಡಲ, ಶಾಸನ ಸಭೆಗಳಿಲ್ಲ. ಮುಂದಿನ ವರ್ಷ ಅಲ್ಲಿ ಚುನಾವಣೆ ನಡೆಸುವ ಲಕ್ಷಣಗಳೂ ಇಲ್ಲ. ಬಲಿಷ್ಠವಾಗಿರುವ ಕೇಂದ್ರ ಸರಕಾರ ದೃಢ ನಿಲುಮೆ ತಾಳಿ ಅಸ್ಸಾಂ ಸಮಸ್ಯೆಯನ್ನು ಬಗೆಹರಿಸದೆ, ಛಿದ್ರಕಾರಿ ಶಕ್ತಿಗಳಿಗೆ ಅವಕಾಶಮಾಡಿಕೊಡುತ್ತಿರುವುದರ ಅರ್ಥವೇನು? ಜಾತೀಯ, ಮತೀಯ ದಂಗೆಗಳೂ, ಅಕಾಲಿ ಚಳುವಳಿಯು ಇಲ್ಲದಂತೆ ಮಾಡಲು ಕೇಂದ್ರದ ಬಲಿಷ್ಠ ಸರಕಾರಕ್ಕೆ ಯಾಕೆ ಸಾಧ್ಯವಾಗುತ್ತಿಲ್ಲ? ಆದ್ದರಿಂದ ಈಗ ನಡೆಯುತ್ತಿರುವ ರಾಜ್ಯ ಸಭೆಗಳ ಚುನಾವಣೆಯಲ್ಲಿ ಬಲಿಷ್ಠವಾದ ಕೇಂದ್ರದ ಪ್ರಶ್ನೆ ಎಲ್ಲಿ ಉದ್ಭವಿಸುತ್ತದೆ ?

ಕಾಂಗ್ರೆಸ್ಸಿನ ಮೂಲ ಕಾರ್ಯಕ್ರಮದಲ್ಲಿ "ಸಮಾಜವಾದ"ವೆಂಬ ಶಬ್ದವಿದ್ದರೂ, ಈಗ ಬಿಡುಗಡೆ ಮಾಡಿರುವ ಚುನಾವಣಾ ಘೋಷಣೆಯಲ್ಲಿ "ಸಮಾಜವಾದ ಉಲ್ಲೇಖವೇ ಇಲ್ಲ. ಹಾಗೆಯೇ ಆಂಧ್ರ, ಕರ್ನಾಟಕಗಳಲ್ಲಿ ಕಳೆದ ಕೆಲವು ವರ್ಷಗಳಿಂದ ಒಂದೇ ಸಮನೆ ನಡೆಯುತ್ತಿರುವ ರೈತರ, ಕೃಷಿ ಕಾರ್ಮಿಕರ, ಭೂಹೀನ ರೈತರ ಚಳುವಳಿ, ಅವರ ಸಮಸ್ಯೆಗಳ ಕುರಿತು ಚಕಾರವೆತ್ತಿಲ್ಲ. ಕಾಂಗ್ರೆಸ್ಸಿನ 20 ಅಂಶಗಳ ಕಾರ್ಯಕ್ರಮದಲ್ಲಿ ಇವರ ಸಮಸ್ಯೆಗಳು ಅಳವಡಿಸಲ್ಪಟ್ಟಿಲ್ಲವೇ ? ಹಾಗಾದರೆ 20 ಅಂಶಗಳ ಕಾರ್ಯಕ್ರಮವನ್ನು ಜ್ಯಾರಿಯಲ್ಲಿ ತರಲು ತನ್ನ ಪಕ್ಷಕ್ಕೆ ಮತ ನೀಡಿರೆಂದು ಕೇಳಿಕೊಳ್ಳುವುದರಲ್ಲಿ ಅರ್ಥವೇನಿದೆ? ಕಳೆದ ಮೂರು ವರ್ಷಗಳಿಂದ ಕೈಗಾರಿಕೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರು ಒಂದೇ ಸಮನೆ ಹೋರಾಟಗಳನ್ನು ನಡೆಸುತ್ತಲೇ ಇದ್ದಾರೆ. ಕಾರ್ಖಾನೆ ಮಾಲಿಕರ ಲಾಭ ಬಡಕತನ, ಅತಿಪ್ರಸರಣ, ಬೆಲೆಯೇರಿಕೆ, ನೌಕರಿಯಲ್ಲಿ ಭದ್ರತೆ-ಮೊದಲಾದ ಪ್ರಶ್ನೆಗಳಿಗೆ ಸಂಬಂಧಪಟ್ಟು ಹೋರಾಟ ನಡೆಯುತ್ತಿದೆ. ಉತ್ಪಾದನೆಗೆ ಇದು ನೇರವಾಗಿ ಸಂಬಂಧವಿದ್ದರೂ ಕೂಡ, 1982 ಉತ್ಪಾದನಾ ವರ್ಷವೆಂದು ಘೋಷಿಸಿದ್ದರೂ ಕೂಡ,

(7ನೇ ಪುಟ ನೋಡಿ)

ಆರ್ಥಿಕ ಸಮೀಕ್ಷೆ:

೧೮ ಮಿಲಿಯ ನಿರುದ್ಯೋಗಸ್ಥರು !

–ಆರ್. ಚಂದ್ರ

ದೇಶದ 630 ಉದ್ಯೋಗ ವಿನಿಮಯ ಸಂಸ್ಥೆಗಳಲ್ಲಿ ದಾಖಲಾತಿಯಾದ ನಿರುದ್ಯೋಗಸ್ಥರ ಸಂಖ್ಯೆಯು ಜುಲೈ 1982ರಷ್ಟರಲ್ಲಿ 18.6 ಮಿಲಿಯಕ್ಕೇರಿತು ! (1 ಕೋಟಿ 86 ಲಕ್ಷ) ಉದ್ಯೋಗವಿನಿಮಯ ಸಂಸ್ಥೆಗಳಲ್ಲಿ ದಾಖಲೆಯಾಗದೇ ಇರುವ ಮುಖ್ಯವಾಗಿ ಗ್ರಾಮೀಣ ನಿರುದ್ಯೋಗಸ್ಥರೂ ಸೇರಿದಂತೆ ಸದ್ಯ ದೇಶದ ಒಟ್ಟು ನಿರುದ್ಯೋಗಸ್ಥರ ಸಂಖ್ಯೆಯು 50 ಮಿಲಿಯಕ್ಕೂ(5 ಕೋಟಿ)ಹೆಚ್ಚಿರುವುದೆಂದು ಅಂದಾಜು ಮಾಡಲಾಗಿದೆ. ದೇಶದ ಒಟ್ಟು 700 ಮಿಲಿಯ ಜನಸಂಖ್ಯೆಯಲ್ಲಿ ಶೇ. 50ಕ್ಕಿಂತಲೂ ಹೆಚ್ಚು ಬಡತನ ರೇಖೆಗಿಂತಲೂ ಕೆಳಮಟ್ಟದಲ್ಲಿರುವುದರಿಂದ ಬೃಹತ್ ಪ್ರಮಾಣದಲ್ಲಿ ಅರೆ ಉದ್ಯೋಗಸ್ಥರಿರುವುದನ್ನೂ ಗಮನಿಸಬೇಕು. ಅಂದರೆ ವರ್ಷದ ಕೆಲವೇ ಕಾಲ ಕೆಲಸ ಇರುವವರು, ಅಗತ್ಯತೆ ಹಾಗೂ ಅರ್ಹತೆಗಿಂತ ಕಡಿಮೆ ಮಟ್ಟದ ಕಡಿಮೆ ಕೂಲಿಯ ಕೆಲಸ ಇರುವವರು ನೂರಾರು ಕೋಟಿ. ಕಳೆದ 20 ವರ್ಷಗಳಲ್ಲಿ ಉದ್ಯೋಗವಿನಿಮಯ ಸಂಸ್ಥೆಗಳಲ್ಲಿಯೇ ದಾಖಲೆಯಾದ ನಿರುದ್ಯೋಗಸ್ಥರ ಸಂಖ್ಯೆ ಹೀಗಿದೆ :

ವರ್ಷ	ನಿರುದ್ಯೋಗಸ್ಥರು (ಮಿಲಿಯ)	ವರ್ಷ	ನಿರುದ್ಯೋಗಸ್ಥರು (ಮಿಲಿಯ)
1961	1.833	1972	6.896
1962	2.380	1973	8.218
1963	2.518	1974	8.433
1964	2.493	1975	9.326
1965	2.585	1976	9.772
1966	2.622	1977	10.924
1967	2.740	1978	12.678
1968	3.012	1979	14.334
1969	3.424	1980	15.170
1970	4.069	1981	16.584
1971	5.100	1982 ಜುಲೈ	18.600

ಕಳೆದ ಇಪ್ಪತ್ತು ವರ್ಷಗಳಲ್ಲಿ ನಿರುದ್ಯೋಗಸ್ಥರ ಸಂಖ್ಯೆಯು 1.833 ಮಿಲಿಯದಿಂದ (1961) 16.60 ಮಿಲಿಯಕ್ಕೇರಿತು (1981). ಅಂದರೆ 9 ಪಾಲು ಹೆಚ್ಚಿತು. ಆದರೆ ಈ ಎರಡು ದಶಕದ ಅವಧಿಯಲ್ಲಿ ಜನಸಂಖ್ಯೆಯು ಶೇ. 50ರಷ್ಟೇ ಹೆಚ್ಚಾಗಿತ್ತು. ನಿರುದ್ಯೋಗ ಹೆಚ್ಚಳದ ದರವು ಜನಸಂಖ್ಯೆ ಹೆಚ್ಚಳದ ದರದ 18 ಪಾಲರಷ್ಟಾಗಿರುವುದನ್ನು ಗಮನಿಸಬೇಕು. ನಿರುದ್ಯೋಗಸ್ಥರ ಸಂಖ್ಯೆಯು ವರ್ಷಕ್ಕೆ ಶೇ. 10-12ರ ದರದಲ್ಲಿ ಹೆಚ್ಚುತ್ತಿದ್ದು, ಒಟ್ಟು ದುಡಿಮೆಗಾರರ ಸಂಖ್ಯೆ(Total Labour force) ಹೆಚ್ಚಳದ ದರಕ್ಕಿಂತ ನಾಲ್ಕು ಪಾಲು ಅಧಿಕವಾಗಿದೆ. ಇದರಿಂದ ತಿಳಿದು ಬರುವುದೇನೆಂದರೆ, ನಿರುದ್ಯೋಗ ಹೆಚ್ಚಳಿಕ್ಕೆ ಜನಸಂಖ್ಯೆ ಹೆಚ್ಚಳವು ನೇರಕಾರಣವಾಗಿರದೆ ಗ್ರಾಮೀಣ ಹಾಗೂ ಪೇಟೆ ಪಟ್ಟಣಗಳಲ್ಲಿ ಸಂಪತ್ತು ಮತ್ತು ಆದಾಯಗಳ ವಿತರಣೆಯಲ್ಲಿ ಅಪಾರ ಅಸಮಾನತೆ ಇರುವುದೇ ಕಾರಣ ಎಂದು ಸ್ಪಷ್ಟವಾಗುವುದು. ಅರ್ಥಾತ್, ಸ್ವಾತಂತ್ರ್ಯದ ನಂತರ ಕಾಂಗ್ರೆಸ್ ಅನುಸರಿಸಿಕೊಂಡು ಬಂದ ಬಂಡವಾಳಶಾಹಿ ಆರ್ಥಿಕ ಧೋರಣೆಯೇ ನಿರುದ್ಯೋಗ ಸಮಸ್ಯೆಗೆ ಪ್ರಮುಖ ಕಾರಣ ಎಂದು ತಿಳಿಯಬೇಕು.

1966ರ ಅಂತ್ಯದಲ್ಲಿ ಇಂದಿರಾ ಗಾಂಧಿ ಪ್ರಧಾನಿಯಾಗಿ ಅಧಿಕಾರಕ್ಕೆ ಬಂದಾಗ ನಿರುದ್ಯೋಗಸ್ಥರ ಸಂಖ್ಯೆ 2.6 ಮಿಲಿಯದಷ್ಟಾಗಿತ್ತು. ಮುಂದೆ 1976ರ ಅಂತ್ಯದಲ್ಲಿ ತುರ್ತುಪರಿಸ್ಥಿತಿಯ ಪರ್ವಕಾಲದಲ್ಲಿ ನಿರುದ್ಯೋಗಸ್ಥರ ಸಂಖ್ಯೆಯು 9.8 ಮಿಲಿಯಕ್ಕೇರಿತು. ಅಂದರೆ, ಇಂದಿರಾ ಗಾಂಧಿಯ ಮೊದಲ 11 ವರ್ಷಗಳ ಆಳ್ವಿಕೆಯಲ್ಲಿ ನಿರುದ್ಯೋಗಸ್ಥರ ಸಂಖ್ಯೆ ನಾಲ್ಕುಪಾಲು ಹೆಚ್ಚಾಯಿತು !

1979 ರಲ್ಲಿ ಇಂದಿರಾ ಗಾಂಧಿ ಪುನಃ ಅಧಿಕಾರಕ್ಕೆ ಬರುವ ಸ್ವಲ್ಪ ಮುಂಚೆ ನಿರುದ್ಯೋಗಸ್ಥರ ಸಂಖ್ಯೆ 14.33 ಮಿಲಿಯದಷ್ಟಾಗಿದ್ದು, ಮುಂದಿನ ಎರಡು ವರ್ಷಗಳಲ್ಲಿ 1981ರ ಅಂತ್ಯದಲ್ಲಿ 16.6 ಮಿಲಿಯಕ್ಕೇರಿತು. ಅಂದರೆ, ಎರಡನೇ ಅಧಿಕಾರಾವಧಿಯ ಮೊದಲ ಎರಡು ವರ್ಷಗಳಲ್ಲಿಯೇ ನಿರುದ್ಯೋಗಸ್ಥರ ಸಂಖ್ಯೆ 2.3 ಮಿಲಿಯದಷ್ಟು ಹೆಚ್ಚಾಯಿತು. ಇದು 1962 ರಲ್ಲಿದ್ದ ಒಟ್ಟು ನಿರುದ್ಯೋಗಸ್ಥರ ಸಂಖ್ಯೆಯಷ್ಟಾಗಿದೆ. ಸ್ವಾತಂತ್ರ್ಯದ ನಂತರದ 15 ವರ್ಷಗಳಲ್ಲಿ ಉಂಟಾದ ನಿರುದ್ಯೋಗಸ್ಥರ ಸಂಖ್ಯೆಯಷ್ಟೇ ಇಂದಿರಾ ಗಾಂಧಿಯ ಆಳ್ವಿಕೆಯ ಎರಡನೇ ಅವಧಿಯ ಮೊದಲ ಎರಡು ವರ್ಷಗಳಲ್ಲಿಯೇ ನಿರುದ್ಯೋಗಸ್ಥರ ಸಂಖ್ಯೆ ಹೆಚ್ಚಾಯಿತು !

1971 'ಗರೀಬಿ ಹಠಾವೋ' ಮತ್ತು 1975-77ರ ತುರ್ತುಪರಿಸ್ಥಿತಿಯ 20 ಅಂಶ ಆರ್ಥಿಕ ಕಾರ್ಯಕ್ರಮಗಳಿಂದ ದೇಶದಲ್ಲಿನ ನಿರುದ್ಯೋಗ ಬಡತನ ಸಮಸ್ಯೆಗಳನ್ನು ಇಂದಿರಾ ಕಾಂಗ್ರೆಸ್ ಆಳ್ವಿಕೆಯು ನಿವಾರಿಸಲು ಅಸಮರ್ಥವಾಯಿತು. ನಿರುದ್ಯೋಗಸ್ಥರ ಸಂಖ್ಯೆಯು ಅನಿಯಂತ್ರಿತವಾಗಿ ಹೆಚ್ಚುತ್ತಲೇ ಇದೆ.

6ನೇ ಯೋಜನೆಯಲ್ಲಿ ಉದ್ಯೋಗಾವಕಾಶ :

ದೇಶದ ಉತ್ಪಾದನೆ, ಉದ್ಯೋಗ, ಮುಂತಾದ ಆರ್ಥಿಕ ಅಭಿವೃದ್ಧಿಗಳನ್ನು ಹೆಚ್ಚಿಸಲು ಆರನೇ ಯೋಜನೆಯ ಅವಧಿಯಲ್ಲಿ [1980-85] ಸಾರ್ವಜನಿಕ ಕ್ಷೇತ್ರದಲ್ಲಿ ರೂ. 97500 ಕೋಟಿ ಹಾಗೂ ಖಾಸಗೀ ಕ್ಷೇತ್ರದಲ್ಲಿ ರೂ. 74710 ಕೋಟಿಯಷ್ಟು ಬೃಹತ್ ಪ್ರಮಾಣದ ಬಂಡವಾಳ ಹೂಡುವಿಕೆ ಆಗಲಿದೆ. ಪರಿಣಾಮವಾಗಿ ಈ ಅವಧಿಯಲ್ಲಿ ವಿವಿಧ ಕಾರ್ಯಕ್ರಮಗಳ ಮೂಲಕ ದೇಶದಲ್ಲಿ 34 ಮಿಲಿಯ ಜನರಿಗೆ ಹೊಸ ಉದ್ಯೋಗಾವಕಾಶಗಳನ್ನೊದಗಿಸುವ ನಿರೀಕ್ಷೆ ಇದೆ. ಅಂದರೆ, ದೇಶದ ಒಟ್ಟು ಉದ್ಯೋಗಸ್ಥರ ಸಂಖ್ಯೆಯು 151-110 ಮಿಲಿಯ [1979–80] ದಿಂದ 185.389 ಮಿಲಿಯ [1984-85]ಕ್ಕೇರಲಿದೆ. ಈ ಅವಧಿಯೂ 15 ವರ್ಷಕ್ಕಿಂತ ಹೆಚ್ಚು ಪ್ರಾಯದ 34 ಮಿಲಿಯ ಹೊಸ ಉದ್ಯೋಗಾಕಾಂಕ್ಷಿಗಳುಇರಬಹುದಾದುದರಿಂದ ಯೋಜನೆಯಲ್ಲಿ ಎಲ್ಲಾ ಕಾರ್ಯಕ್ರಮಗಳು ಕೈಗೂಡಿದರೆ 34 ಮಿಲಿಯ ಜನರಿಗೆ ಉದ್ಯೋಗಾವಕಾಶ ದೊರೆಯುವುದೆಂದು ನಿರೀಕ್ಷಿಸಲಾಗಿದೆ. ಆಷ್ಟಾದರೂ ಯೋಜನೆಯ ಅಂತ್ಯದಲ್ಲಿ ಒಟ್ಟು ನಿರುದ್ಯೋಗಸ್ಥರ ಸಂಖ್ಯೆಯು ಯೋಜನೆಯ ಪ್ರಾರಂಭದಲ್ಲಿದ್ದಷ್ಟೇ, 14.334 ಮಿಲಿಯದಷ್ಟು ಉಳಿಯುವುದು. ನಿರುದ್ಯೋಗ ಸಮಸ್ಯೆಯನ್ನು ಸಂಪೂರ್ಣವಾಗಿ ಹೋಗಲಾಡಿಸಲು ಅಸಾಧ್ಯ ಎಂದು ಯೋಜನಾ ಆಯೋಗವೇ ಅಭಿಪ್ರಾಯಪಟ್ಟಿದೆ. ಅಂದರೆ, 6ನೇ ಯೋಜನೆಯು ಆರ್ಥಿಕ ಪ್ರಗತಿ–ಮುಖ್ಯವಾಗಿ ಹೊಸ ಉದ್ಯೋಗಾವಕಾಶ ಒದಗಿಸುವ ಕುರಿತು 5ನೇ ಯೋಜನೆಯ ಅಂತ್ಯದ ಪರಿಸ್ಥಿತಿಗಿಂತ ಹಿಂಜರಿಯದೇ ಇರುವುದಾಗಿದೆ !

ಆದರೆ, 6ನೇ ಯೋಜನೆಯ ಅವಧಿಯಲ್ಲಿ ಮೌಲ್ಯಾಂಕಿಸಿದ ಸಂಕುಚಿತ ಗುರಿ ಸಾಧನೆಯೂ ಕಷ್ಟಸಾಧ್ಯ. ಕಾರಣಗಳು : [1] ಹಣದುಬ್ಬರ, ಆರ್ಥಿಕ ಹಿಂಜರಿತ, ಜಾಗತಿಕ ಬಂಡವಾಳಶಾಹಿ ಪದ್ಧತಿಯಲ್ಲಿನ ತೀವ್ರ ಆರ್ಥಿಕ ಬಿಕ್ಕಟ್ಟು, ಇತ್ಯಾದಿ ಕಾರಣಗಳಿಂದ ಯೋಜನೆಯ ಕಾರ್ಯಕ್ರಮಗಳೆಲ್ಲವೂ ನಿರೀಕ್ಷಿಸಿದಂತೆ ಕಾರ್ಯಗತಗೊಳ್ಳಲಾರವು; ಹಿಂದಿನ ಎಲ್ಲಾ ಯೋಜನೆಗಳೂ ಇಂತಹ ಕಾರಣಗಳಿಂದಲೇ ಗುರಿ ಸಾಧಿಸಲು ಸೋತಂತೆಯೇ ಈಗಿನ ಯೋಜನೆಯೂ ವಿಫಲವಾಗುವುದು ಖಂಡಿತ. [2] ಯೋಜನೆಯ ಅವಧಿಯಲ್ಲಿ ಹೊಸ ಉದ್ಯೋಗಾಕಾಂಕ್ಷಿಗಳ ಸಂಖ್ಯೆಯನ್ನು ಯೋಜನಾ ಆಯೋಗ ಸರಿಯಾಗಿ ಗಣನೆಗೆ ತೆಗೆದುಕೊಳ್ಳಲಿಲ್ಲ. ಅವರ ಸಂಖ್ಯೆ 34 ಮಿಲಿಯಕ್ಕಿಂತಲೂ ಹೆಚ್ಚಾಗಿರಬಹುದೆಂದು ಅನೇಕ ಪರಿಣಿತ ಅಧ್ಯಯನಗಳಿಂದ ತಿಳಿದು ಬರುತ್ತದೆ. [3] ಹೀಗಾಗಿ, 6ನೇ ಯೋಜನೆಯ ಅಂತ್ಯದಲ್ಲಿ ನಿರುದ್ಯೋಗಸ್ಥರ, ಅರೆ ಉದ್ಯೋಗಸ್ಥರ, ಬಡವರ ಮತ್ತು ದರಿದ್ರರ ಸಂಖ್ಯೆಯು ಯೋಜನೆಯ ಪ್ರಾರಂಭದಲ್ಲಿದ್ದುದಕ್ಕಿಂತಲೂ ಗಣನೀಯವಾಗಿ ಹೆಚ್ಚುವುದೆಂದು ಭಯಪಡಲಾಗಿದೆ. ಹೊಸ 20 ಅಂಶ ಆರ್ಥಿಕ ಕಾರ್ಯಕ್ರಮಗಳೂ ನಿರುದ್ಯೋಗದಂತಹ ಗಂಭೀರ ಸಮಸ್ಯೆಯನ್ನು ನಿವಾರಿಸಲಾರವು. ಹೊಸ ಯೋಜನೆಯ ಮೊದಲ ಎರಡೂವರೆ ವರ್ಷಗಳಲ್ಲಿ ನಿರುದ್ಯೋಗಸ್ಥರ ಸಂಖ್ಯೆಯು ಏರುತ್ತಲೇ ಇದೆ. ಉದಾ : 1979: 14.334 ಮಿ; 1980 : 15.170 ಮಿ; 1981 : 16.584 ಮಿ; 1982 [ಜುಲೈ] 18.600 ಮಿ; ಒಟ್ಟು ಹೆಚ್ಚಳ : 2.266 ಮಿ.

ವಿದ್ಯಾವಂತ ನಿರುದ್ಯೋಗಸ್ಥರು :

ದೇಶದಲ್ಲಿ 15 ರಿಂದ 29 ವರ್ಷ ಪ್ರಾಯದ ವಿದ್ಯಾವಂತ ಯುವಜನರು ಒಟ್ಟು–ದುಡಿಮೆಗಾರರ ಸಂಖ್ಯೆಯು [Total labour force] ಶೇ. 12 ರಷ್ಟು ಎಂದು ಅಂದಾಜು ಮಾಡಲಾಗಿದೆ. ಆದರೆ, ಅದೇ ಪ್ರಾಯದ ನಿರುದ್ಯೋಗಸ್ಥರ ಸಂಖ್ಯೆಯು ಒಟ್ಟು ನಿರುದ್ಯೋಗಸ್ಥರ ಸಂಖ್ಯೆಯ ಶೇ. 33.2ರಷ್ಟಾಗಿದೆ–ಶೇ. 23.8 ರಷ್ಟು ಹೈಸ್ಕೂಲ್‌ವರೆಗೆ ಓದಿದವರು ಮತ್ತು ಶೇ. 9.4ರಷ್ಟು ಪದವಿಧರರು ಮತ್ತು ಹೆಚ್ಚಿನ ವಿದ್ಯಾರ್ಹತೆ ಉಳ್ಳವರು.

1976ರ ಉದ್ಯೋಗವಿನಿಮಯ ಸಂಸ್ಥೆಗಳ ಅಂಕೆ ಸಂಖ್ಯೆಗಳ ಆಧಾರದಲ್ಲಿ ಅವುಗಳಲ್ಲಿ ದಾಖಲೆಯಾದ ಒಟ್ಟು ನಿರುದ್ಯೋಗಸ್ಥರಲ್ಲಿ ಶೇ. 50ರಷ್ಟು ವಿದ್ಯಾವಂತರಾಗಿದ್ದರು. ಮುಂದಿನ ವರ್ಷಗಳಲ್ಲಿ ವಿದ್ಯಾವಂತ ನಿರುದ್ಯೋಗಸ್ಥರ ಸಂಖ್ಯೆ ಏರಿಕೆಯ ದರಲ್ಲಿ ಹೆಚ್ಚುತ್ತಾ ಹೋಯಿತು. 1979ರಲ್ಲಿ ಒಟ್ಟು 16.2 ಮಿ ನಿರುದ್ಯೋಗಸ್ಥರಲ್ಲಿ 11.55 ಮಿ. ನಿರುದ್ಯೋಗಸ್ಥರು ವಿದ್ಯಾವಂತರು [ಪ್ರಾಥಮಿಕ ಶಿಕ್ಷಣಕ್ಕಿಂತ ಹೆಚ್ಚಿನ ವಿದ್ಯಾವಂತರು]. 1982ರಲ್ಲಿ ಒಟ್ಟು 18 ಮಿ. ನಿರುದ್ಯೋಗಸ್ಥರಲ್ಲಿ 13 ಮಿ. ವಿದ್ಯಾವಂತ ನಿರುದ್ಯೋಗಸ್ಥರು. 1961-1976ರ ಅವಧಿಯಲ್ಲಿ ಒಟ್ಟು ನಿರುದ್ಯೋಗಸ್ಥರ ಸಂಖ್ಯೆಯು ವರ್ಷಕ್ಕೆ ಶೇ. 11ರ ದರದಲ್ಲಿ ಹೆಚ್ಚಾಗಿದ್ದರೆ, ವಿದ್ಯಾವಂತ ನಿರುದ್ಯೋಗಸ್ಥರ ಸಂಖ್ಯೆ ವರ್ಷಕ್ಕೆ ಶೇ. 14.5 ದರದಲ್ಲಿ ಹೆಚ್ಚಾಗಿತ್ತು ಮತ್ತು ಪದವೀಧರ ನಿರುದ್ಯೋಗಿಗಳ ಸಂಖ್ಯೆಯು ವರ್ಷಕ್ಕೆ ಶೇ. 20ರಷ್ಟು ಹೆಚ್ಚಾಗಿತ್ತು! ಮುಂದಿನ ವರ್ಷಗಳಲ್ಲಿ ಈ ಏರಿಕೆಯ ದರಗಳೆಲ್ಲವೂ ಹೆಚ್ಚುತ್ತಲೇ ಇವೆ.

ನಿರುದ್ಯೋಗ ಸಮಸ್ಯೆಯಿಂದಾಗಿ, ಮುಖ್ಯವಾಗಿ ವಿದ್ಯಾವಂತ ಯುವಜನರ ನಿರುದ್ಯೋಗದಿಂದಾಗಿ ಗಂಭೀರ ಸಮಸ್ಯೆಗಳುಂಟಾಗುವುವು. ದೇಶದ ಯುವಜನರ ಕ್ರಿಯಾತ್ಮಕ ಶಕ್ತಿಯು ವ್ಯರ್ಥವಾಗುವುದು. ದುರುಪಯೋಗವಾಗುವುದು. ರಾಜಕೀಯ, ಆರ್ಥಿಕ ಸಾಮಾಜಿಕ ಅಪರಾಧಗಳು ಹೆಚ್ಚುವುವು. ಯುವಜನರ ಭವಿಷ್ಯ ಕತ್ತಲಾಗುವುದು. ನಿರುದ್ಯೋಗಸ್ಥರ ಭಾರವೆಲ್ಲವೂ ಉದ್ಯೋಗಸ್ಥ ಕುಟುಂಬಗಳ ಮೇಲೆ ಬೀಳುವುದು. ಪ. ಬಂಗಾಳ ಮತ್ತೆ ತ್ರಿಪುರಾ ರಾಜ್ಯಗಳ ಎಡರಂಗ ಸರಕಾರಗಳು ಮತ್ತು ಕೇರಳದ ಹಿಂದಿನ ಎಡ-ಪ್ರಜಾಪ್ರಭುತ್ವರಂಗದ ಸರಕಾರ ಮಾತ್ರ ನಿರುದ್ಯೋಗಸ್ಥರಿಗೆ ಸ್ವಲ್ಪ ಪ್ರಮಾಣದಲ್ಲಾದರೂ ನಿರುದ್ಯೋಗ ಭತ್ತೆ ಕೊಡಲು ನಿರ್ಧರಿಸಿದ್ದವು. ಆದರೆ ಕಾಂಗ್ರೆಸ್ ಆಡಳಿತ ಕೇಂದ್ರದಲ್ಲಾಗಲೀ, ರಾಜ್ಯಗಳಲ್ಲಾಗಲೀ ನಿರುದ್ಯೋಗ ಭತ್ತೆ ಕೊಡಲು ಕಡು ವಿರೋಧಿಯಾಗಿದೆ !

ಪರಿಹಾರ ?

ಭಾರೀ ಪ್ರಮಾಣದಲ್ಲಿ ಬಂಡವಾಳ ಹೂಡಿದರೆ ದೇಶದ ಉತ್ಪಾದನೆ ಹಾಗೂ ಉದ್ಯೋಗಾವಕಾಶ ಹೆಚ್ಚುತದೆ ಎಂಬ ಹಳೆಯ ಬಂಡವಾಳಶಾಹಿವಾದ ಸುಳ್ಳಾಗುತ್ತಿದೆ. 35 ವರ್ಷಗಳ ನಮ್ಮ ದೇಶದ ಆರ್ಥಿಕ ಪರಿಸ್ಥಿತಿಯೇ ಇದಕ್ಕೆ ಸಾಕ್ಷಿ. ಉತ್ಪಾದನೆಯ ನ್ಯಾಯವಿತರಣೆ ಸಮರ್ಪಕವಾಗಿಲ್ಲದಿದ್ದರೆ ಸಂಪತ್ತು ಹಾಗೂ ಆದಾಯಗಳ ಅಸಮಾನ ಪ್ರಮಾಣದಲ್ಲಿ ಹಂಚಿ ಹೋಗುವುವು. ನಿರುದ್ಯೋಗ ಸಮಸ್ಯೆ ಹೆಚ್ಚುವುದು. ನಿರುದ್ಯೋಗ ಸಮಸ್ಯೆಯ ಪರಿಹಾರಕ್ಕೆ ಕೆಲವು ಮೂಲಭೂತ ಸಾಮಾಜಿಕ ಆರ್ಥಿಕ ಬದಲಾವಣೆಗಳಾಗಬೇಕು.

1. ಗ್ರಾಮೀಣ ಪ್ರದೇಶಗಳಿಂದ ನಗರ ಪ್ರದೇಶಗಳಿಗೆ ಜನರು ಭಾರೀ ಸಂಖ್ಯೆಯಲ್ಲಿ ಉದ್ಯೋಗಾಕಾಂಕ್ಷಿಗಳಾಗಿ ವಲಸೆ ಹೋಗುವುದನ್ನು ನಿಲ್ಲಿಸಬೇಕು. ಗ್ರಾಮೀಣ ಪ್ರದೇಶಗಳಲ್ಲಿಯೇ ಹೆಚ್ಚಿನ ಉದ್ಯೋಗಾವಕಾಶಗಳನ್ನು ಒದಗಿಸಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗಾವಕಾಶಗಳಿಗೆ ಮೂಲಾಧಾರ ವ್ಯವಸಾಯ. ವ್ಯವಸಾಯ ಮಾಡಲು ಭೂಮಾಲೀಕರ, ಶ್ರೀಮಂತರೈತರ ಸ್ವಾಮ್ಯದಲ್ಲಿರುವ ಹೆಚ್ಚುವರಿ ಭೂಮಿಯನ್ನೂ, ಬೇನಾಮಿ ಭೂಮಿಯನ್ನೂ,

(7ನೇ ಪುಟ ನೋಡಿ)

ಅಭ್ಯರ್ಥಿಗಳ ಪರಿಚಯ

(3ನೇ ಪುಟದಿಂದ)

ಕಾಂ| ಟಿ. ಎಸ್. ಮಣಿ

ಒಂದು ದೊಡ್ಡ ಸಂಘಟನೆಯಾಗಿ ರೂಪುಗೊಳ್ಳಲು ಕಾರಣರಾಗಿರುವ ಸಂಗಾತಿಗಳಾದ ಕಾಂ| ಸವರೀದಾಸ್, ದಿವಂಗತ ಕೆ. ಎಸ್. ವಾಸನ್, ಮುಂತಾದವರೊಡನೆ ಕೆಲಸ ಮಾಡಿದ ಅನುಭವ ಕಾಂ| ಮಣಿಯವರಿಗಿದೆ.

1968 ಮತ್ತು 1978ರಲ್ಲಿ ಎರಡು ಬಾರಿ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸಿದ್ದ ಕಾಂ| ಮಣಿಯವರು ಕೆ. ಜಿ. ಎಫ್. ಕಾರ್ಮಿಕರ ವಿಶ್ವಾಸಕ್ಕೆ ಪಾತ್ರರಾಗಿರುವ ಸರಳ ಮನೋಭಾವನೆಯ ಮುಖಂಡರಾಗಿದ್ದಾರೆ.

ಈಗ ಕಾಂ| ಮಣಿಯವರು ಸಿ. ಐ. ಟಿ. ಯು. ವಿನ ಜನರಲ್ ಕೌನ್ಸಿಲ್ ಸದಸ್ಯರಾಗಿಯೂ, ಸಿ. ಐ. ಟಿ ಯು. ವಿನ ರಾಜ್ಯ ಸಮಿತಿ ಉಪಾಧ್ಯಕ್ಷರಾಗಿಯೂ, ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿ ಸದಸ್ಯರಾಗಿಯೂ, ಕೆ.ಜಿ.ಎಫ್.ನ ಪಕ್ಷದ ಕಾರ್ಯದರ್ಶಿಯಾಗಿ ಕೆಲಸಮಾಡುತ್ತಿದ್ದಾರೆ. ಇವರು ಸಿ. ಪಿ. ಐ. [ಎಂ] ಅಭ್ಯರ್ಥಿಯಾಗಿ ಕೆ.ಜಿ ಎಫ್.ನಿಂದ ಸ್ಪರ್ಧಿಸುತ್ತಿದ್ದಾರೆ.

○

ಕಾಂ| ಸೂರಿ

ಕಾರ್ಮಿಕ ಸಂಘಟನೆಯನ್ನು ಪ್ರವೇಶಿಸಿ, ಕೆ.ಪಿ.ಟಿ.ಯು.ಸಿ.ಯ ಉಪಾಧ್ಯಕ್ಷರಾಗಿ ಹತ್ತಿ ಗಿರಣಿ ಕಾರ್ಮಿಕರ ಹಲವಾರು ಹೋರಾಟಗಳಿಗೆ ನಾಯಕತ್ವ ನೀಡಿದ್ದಾರೆ.

1970ರಲ್ಲಿ ಸಿ.ಐ.ಟಿ.ಯು. ಸ್ಥಾಪನೆಯಾದ ನಂತರ ಅದರ ಕರ್ನಾಟಕ ಘಟಕದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿರುವ ಸೂರಿಯವರು 1973ರಲ್ಲಿ ಕನಿಷ್ಠ ವೇತನ ಪರಿಷ್ಕರಣಕ್ಕಾಗಿ ರಾಜ್ಯಾದ್ಯಂತ ನಡೆದ ಐದು ಲಕ್ಷ ಬೀಡಿ ಕಾರ್ಮಿಕರ ಭಾರೀ ಮುಷ್ಕರದ ನಾಯಕತ್ವ ವಹಿಸಿದ್ದರು.

1979ರಲ್ಲಿ ಮೈಕೋ ಕಾರ್ಮಿಕ ಸಂಘದ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟ ನಂತರ ಅಲ್ಲಿ ಅವರು ನಡೆಸಿದ ಹೋರಾಟಗಳು ಬೆಂಗಳೂರಿನ ಕಾರ್ಮಿಕ ಚಳುವಳಿಯ ಇತಿಹಾಸದಲ್ಲಿ ಬಹುಕಾಲ ಉಳಿಯುವ ನೆನಪು. ನಂತರ ಐ. ಟಿ. ಸಿ. ಮುಂತಾದ ಪ್ರಮುಖ ಕಾರ್ಮಿಕ ಸಂಘಗಳ ನಾಯಕತ್ವ ವಹಿಸಿಕೊಂಡದ್ದು ಸಂಘಟನಾತ್ಮಕವಾಗಿ ಪಕ್ಷದ ವರ್ಚಸ್ಸನ್ನು ಕಾರ್ಮಿಕರ ನಡುವೆ ಬೆಳೆಸಲು ನೆರವಾಯಿತು.

1980ರಲ್ಲಿ ಡಬ್ಲ್ಯೂ. ಎಫ್. ಟಿ. ಯು.ನ 35ನೇ ವಾರ್ಷಿಕೋತ್ಸವದಲ್ಲಿ ಭಾಗವಹಿಸಲು ಮಾಸ್ಕೋಗೆ ಪ್ರಯಾಣ. ಅಲ್ಲಿಂದ ಬಲ್ಗೇರಿಯಾದ ಸೋಫಿಯಾದಲ್ಲಿ ನಡೆದ 'ವರ್ಲ್ಡ್ ಪೀಪಲ್ಸ್ ಪಾರ್ಲಿಮೆಂಟ್ ಫಾರ್ ಪೀಸ್'ನಲ್ಲೂ ಭಾಗವಹಿಸಿದರು. ನಂತರ ಪಶ್ಚಿಮ ಜರ್ಮನಿಯ ಸ್ಟಟ್ ಗರ್ಟ್‌ನಲ್ಲಿ ಮೈಕೋ ಆಡಳಿತ ವರ್ಗದೊಂದಿಗೆ ಮಾತುಕತೆ ನಡೆಸಿದರು.

ಈಗ ಕಾಂ|ಸೂರಿಯವರು ಸಿ. ಪಿ. ಐ. (ಎಂ)ನ ಕರ್ನಾಟಕ ರಾಜ್ಯ ಸೆಕ್ರೆಟೇರಿಯೇಟ್ ಸದಸ್ಯರೂ, ಕರ್ನಾಟಕ ರಾಜ್ಯ ಸಿ.ಐ.ಟಿ ಯು.ನ ಅಧ್ಯಕ್ಷರೂ ಆಗಿರುವ ಕಾಂ. ಸೂರಿ ಅವರು ಸಿ.ಪಿ ಐ. (ಎಂ) ಅಭ್ಯರ್ಥಿಯಾಗಿ ಬೆಂಗಳೂರಿನ ವರ್ತೂರು ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದಾರೆ.

●

ಕೇರಳದಲ್ಲಿ :

ಎಸ್.ಎಫ್.ಐ. ಮುಖಂಡರ ಕೊಲೆ

ಕೇರಳದ ಕ್ವಿಲಾನ್ ಜಿಲ್ಲೆಯ ಎಸ್. ಎಫ್.ಐ. ಅಧ್ಯಕ್ಷರಾದ ಕಾಂ| ಸಿ. ವಿ. ಜೋಸ್ ಅವರನ್ನು ದಿ. 17-12-82 ರಂದು ಇಂದಿರಾ ಕಾಂಗ್ರೆಸ್ ನೇತೃತ್ವದ ಕೆ.ಎಸ್.ಯು. ಮತ್ತು ಐ.ಎನ್.ಟಿ. ಯು.ಸಿ. (ಐ)ಗೆ ಸೇರಿದ ಗೂಂಡಾಗಳು ಭೀಕರವಾಗಿ ಕೊಲೆ ಮಾಡಿದ್ದಾರೆ.

ಕಾಂ| ಜೋಸ್ ಅವರು ಕ್ಯಾಥೋಲಿಕಟ್ ಕಾಲೇಜಿನ ಎಸ್. ಎಫ್. ಐ. ನಾಯಕರಾಗಿದ್ದರು.

ಹಲ್ಲೆಯಲ್ಲಿ ಅದೇ ಕಾಲೇಜಿನ ಎಸ್. ಎಫ್.ಐ. ಘಟಕದ ಕಾರ್ಯದರ್ಶಿ ಕಾಂ| ಪ್ರಸಾದ್ ತೀವ್ರವಾಗಿ ಗಾಯಗೊಂಡಿದ್ದಾರೆ.

ಕೊಲೆಗಡುಕರನ್ನು ಬಂಧಿಸಬೇಕೆಂದು ಒತ್ತಾಯಿಸಿ ಜಿಲ್ಲಾದ್ಯಂತ ಮೆರವಣಿಗೆ ನಡೆಸಿದ ವಿದ್ಯಾರ್ಥಿಗಳ ಮೇಲೆ ಪೋಲೀಸರು ಲಾಠೀ ಚಾರ್ಜ್ ಮಾಡಿದ್ದಾರೆ.

ಈ ಕೊಲೆ ರಾಜಕೀಯವನ್ನು ನಿಲ್ಲಿಸದಿದ್ದರೆ ಉಗ್ರ ಚಳುವಳಿ ನಡೆಸಬೇಕಾಗುವುದೆಂದು ಎಸ್.ಎಫ್.ಐ. ಕೇಂದ್ರ ಸಮಿತಿ ಎಚ್ಚರಿಕೆ ನೀಡಿದೆ.

●

ಗಂಗಾವತಿಯಲ್ಲಿ :

ಸೈಕಲ್ ರಿಕ್ಷಾ ಚಾಲಕರ ಹೋರಾಟ

ತಾರೀಕು 2-12-82 ರಂದು ಗಂಗಾವತಿ ನಗರದಲ್ಲಿ ಸೈಕಲ್ ರಿಕ್ಷಾ ಚಾಲಕರ ಸಂಘದ ನ್ಯಾಯುತ ಬೇಡಿಕೆಗಳನ್ನು ಮಂಡಿಸಿ ಬೃಹತ್ ಮೆರವಣಿಗೆಯೊಂದನ್ನು ಸಿ.ಐ.ಟಿ.ಯು. ನೇತೃತ್ವದಲ್ಲಿ ತೆಗೆಯಲಾಯಿತು.

ಈ ಮೊದಲು ತಾರೀಕು 18-9-82 ರಂದು ಸಮಸ್ಯೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಮನವಿ ಪತ್ರವನ್ನು ಸಲ್ಲಿಸಲಾಗಿತ್ತು. ಆ ಪ್ರಕಾರ ನಗರದಲ್ಲಿ ರಿಕ್ಷಾ ಚಾಲಕರಿಗಾಗಿ ಒಟ್ಟು 13 ಸ್ಟ್ಯಾಂಡ್‌ಗಳನ್ನು ಪುರಸಭೆಯವರು ಒದಗಿಸಿಕೊಟ್ಟಿದ್ದಾರೆ. ಅಲ್ಲದೆ ಎಲ್ಲಾ ಚಾಲಕರಿಗೂ (18 ವಯಸ್ಸಿನೊಳಗಿನವರ ಬಿಟ್ಟು) ಲೈಸನ್ಸ್‌ಕೊಟ್ಟಿದೆ. ಆದರೆ ಸಂಘದ ಉಳಿದ ಬೇಡಿಕೆಗಳಾದ ರಿಕ್ಷಾ ಮಾಲೀಕರಿಗೂ ತಮ್ಮ ರಿಕ್ಷಾಗಳಿಗೆ ಏರಿಸಿರುವ ಬಾಡಿಗೆಯನ್ನು ರೂ. 8 ರಿಂದ 4 ರೂ.ಗೆ ಇಳಿಸಬೇಕು. ಬ್ಯಾಂಕಿನಿಂದ ಸಾಲದ ಮೂಲಕ ರಿಕ್ಷಾಗಳನ್ನು ಕೊಡಿಸಬೇಕು. ಮತ್ತು ಖಾಯಾಂ ಆಗಿ ರಿಕ್ಷಾ ತುಳಿಯುವವರಿಗೆ ನಿವೇಶನಗಳನ್ನು ಒದಗಿಸಿಕೊಡಬೇಕು. ಈ ಮುಂತಾದ ಬೇಡಿಕೆಗಳನ್ನು ಈವರಿಗೂ ಈಡೇರಿಸದಿದ್ದಾ ಕಾರಣ ಮತ್ತೆ ಸಂಪು ಹೂಡಬೇಕಾಗಿ ಬಂದಿದೆ. ಎಂದು ವರದಿಯಲ್ಲಿ ತಿಳಿಸಲಾಗಿದೆ.

○

ಸವದತ್ತಿಯಲ್ಲಿ ಹತ್ತಿ ಬೆಳೆಗಾರರ ಸಮಾವೇಶ

ಕರ್ನಾಟಕ ಪ್ರಾಂತ ರೈತ ಸಂಘದ ಬೆಳಗಾವಿ ಜಿಲ್ಲಾ ಸಮಿತಿಯ ಆಶ್ರಯದಲ್ಲಿ 29-11-82ರಂದು ಸವದತ್ತಿಯಲ್ಲಿ ಹತ್ತಿ ಬೆಳೆಗಾರರ ಸಮಾವೇಶ ನಡೆಯಿತು. ಬೀಜ, ರಸಗೊಬ್ಬರ, ಕ್ರಿಮಿನಾಶಕಗಳ ಬೆಲೆಗಳು ದಿನೇ ದಿನೇ ಏರುತ್ತಿದ್ದು, ಮಾರುಕಟ್ಟೆಯಲ್ಲಿ ಅನೇಕ ಮೋಸಗಳಿಗೆ ಒಳಗಾಗಿ ಹತ್ತಿಗೆ ಸರಿಯಾದ ಬೆಲೆ ಸಿಗುತ್ತಿಲ್ಲ. ಈ ಸಮಸ್ಯೆಗಳ ಬಗ್ಗೆ ಚರ್ಚಿಸಲು ಹತ್ತಿ ಬೆಳೆಗಾರರ ಸಮಾವೇಶವನ್ನು ಏರ್ಪಡಿಸಲಾಗಿತ್ತು.

●

ಕಸವನಹಳ್ಳಿಯಲ್ಲಿ ರೈತ ಸಂಘದ ಆರಂಭ

ದಿನಾಂಕ 2-12-82 ರಂದು ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಕಸವನಹಳ್ಳಿಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ನೂತನ ಘಟಕ ಪ್ರಾರಂಭವಾಗಿದೆ. ನೂತನ ಘಟಕದ ಅಧ್ಯಕ್ಷರಾಗಿ ಕಾಂ| ಸಿಳ್ಳೀರ ಚೌಡಪ್ಪ ಉಪಾಧ್ಯಕ್ಷರಾಗಿ ಕಾಂ| ಗೊರಪ್ಪರ ದೊಡ್ಡಹನುಮಪ್ಪ ಕಾರ್ಯದರ್ಶಿಯಾಗಿ ಕಾಂ| ಬಣಕಾರ ಪರಶುರಾಮಪ್ಪ ಮುಂತಾದವರು ಆಯ್ಕೆಯಾಗಿದ್ದಾರೆ.

ರಾಯಚೂರು ತಾಲ್ಲೂಕು ರೈತ-ಕಾರ್ಮಿಕರು ಹೋರಾಟದ ಹಾದಿಯಲ್ಲಿ

ದಿನಾಂಕ 1-12-82 ರಂದು ಕರ್ನಾಟಕ ಪ್ರಾಂತ ರೈತ ಸಂಘ ರಾಯಚೂರು ತಾಲ್ಲೂಕು ಸಮಿತಿಯು, ರೈತ-ಕಾರ್ಮಿಕರ ಬೇಡಿಕೆಗಳನ್ನು ಒತ್ತಾಯಿಸಿ ಉಪವಾಸ ಸತ್ಯಾಗ್ರಹವನ್ನು ಪ್ರಾರಂಭಿಸಿದೆ.

ದಿನಾಂಕ 6-12-82 ರಂದು ಬೇಡಿಕೆಗಳನ್ನು ಒತ್ತಾಯಿಸಿ ಪ್ರತಿಭಟನಾ ಮೆರವಣಿಗೆ ಹಾಗೂ ಬಹಿರಂಗ ಸಭೆಯನ್ನು ನಡೆಸಲಾಯಿತು. ಕಾಂ| ಬಿ. ಎಸ್. ಪಾಟೀಲ ಸ್ವಾಗತಿಸಿದರು. ಕಾಂ| ಸಿ.ಎಸ್.ಬಾಳೆಯವರು ಕಾಂಗ್ರೆಸ್ಸ ಸರಕಾರದ ಬಂಡವಾಳಶಾಹಿ ಪರ, ರೈತ-ಕಾರ್ಮಿಕ ವಿರೋಧಿ ನೀತಿಯನ್ನು ವಿವರಿಸಿ ದೇಶದ ಜನತೆ ಬರಗಾಲ, ಚಂಡಮಾರುತ, ಪ್ರವಾಹಕ್ಕೆ ತುತ್ತಾಗಿ ಸಾವು ಬದುಕಿನಲ್ಲಿರುವಾಗ ಶ್ರೀಮತಿ ಇಂದಿರಾ ಗಾಂಧಿ ಸರಕಾರ ಕೋಟಿಗಟ್ಟಲೆ ಹಣವನ್ನು ಏಷ್ಯಾಡ್ ಕ್ರೀಡೆಗೆ ಖರ್ಚು ಮಾಡಿರುವುದನ್ನು ಖಂಡಿಸಿದರು.

ಕೊನೆಯಲ್ಲಿ ಜಿಲ್ಲಾಧಿಕಾರಿಯವರ ಜೊತೆ ದೀರ್ಘ ಚರ್ಚೆ ನಡೆಸಲಾಯಿತು ಸ್ಥಳೀಯ ಬೇಡಿಕೆಗಳನ್ನು ಈಡೇರಿಸುವುದಾಗಿ ಒಪ್ಪಿದರೂ ಸಹ ಕಾರ್ಯಗತವಾಗುವವರೆಗೆ ಸತ್ಯಾಗ್ರಹವನ್ನು ಮುಂದುವರಿಸುವುದೆಂದು ತೀರ್ಮಾನಿಸಲಾಯಿತು.

ಸಂತಾಪ

ದೇರೆಬೈಲ್ ಕೊಂಚಾಡಿ ನಾರಾಯಣ ದೇವಾಡಿಗರ ಪುತ್ರಿ ಹಾಗೂ ಕೊಂಚಾಡಿ ವೆಂಕಪ್ಪನವರ ಪತ್ನಿ ಶ್ರೀಮತಿ ಪ್ರೇಮಾರವರು ತಾರೀಕು 27-11-82 ರಂದು ನಿಧನರಾದರು.

ಶ್ರೀಮತಿ ಪ್ರೇಮಾರವರು ಪದವು ಪ್ರದೇಶ ಬೀಡಿ ಕೆಲಸಗಾರರ ಸಂಘದ ಸಕ್ರಿಯ ಕಾರ್ಯಕರ್ತರಾಗಿದ್ದರು. ಅವರ ಅಕಾಲ ನಿಧನಕ್ಕೆ ಪದವು ಪ್ರದೇಶ ಬೀಡಿ ಕೆಲಸಗಾರರ ಸಂಘವು ತನ್ನ ಸಂತಾಪವನ್ನು ವ್ಯಕ್ತಪಡಿಸುವುದರೊಂದಿಗೆ ದಿವಂಗತರ ಕುಟುಂಬದ ದುಃಖದಲ್ಲಿ ಸಹಭಾಗಿಯಾಗಿದೆ.

○

ಫಜಿಯಾಬಾದ್ ಸಿ.ಐ.ಟಿ.ಯು. ಮುಖಂಡರ ಕೊಲೆ

ಫಜಿಯಾಬಾದ್‌ನ ಕಾರ್ಮಿಕ ಮುಖಂಡರೂ, ಅಲ್ಲಿನ ಡೆನ್‌ಫಾಸ್ ಫ್ಯಾಕ್ಟರಿ ಯೂನಿಯನ್‌ನ ಅಧ್ಯಕ್ಷರೂ ಆಗಿದ್ದ 28 ವರ್ಷ ವಯಸ್ಸಿನ ಕಾಂ| ಕ್ರಿಶನ್ ಪಾಲ್‌ರನ್ನು ಎ ಐ ಟಿ ಯು. ಸಿ.ಗೆ ಸೇರಿದ ವ್ಯಕ್ತಿಗಳ ಗುಂಪೊಂದು ಡಿಸೆಂಬರ್ 13 ರಂದು ಕೊಲೆ ಮಾಡಿದೆ.

ಸಿ. ಐ. ಟಿ. ಯು ನಾಯಕತ್ವದಲ್ಲಿರುವ ಕಾರ್ಮಿಕರ ನಡುವೆ ತನ್ನ ಪ್ರಭಾವವನ್ನು ಹರಡಲು ವಿಫಲಗೊಂಡ ಎ.ಐ.ಟಿ.ಯು.ಸಿ. ನಾಯಕತ್ವವು ಫಜಿಯಾಬಾದ್ ಜಿಲ್ಲೆಯಲ್ಲಿ ಸಿ.ಐ.ಟಿ. ನಾಯಕರ ಹಾಗೂ ಕಾರ್ಮಿಕರ ಮೇಲೆ ಯೋಜಿತ ಧಾಳಿ ನಡೆಸುತ್ತಿದೆ. ಕಾಂ| ಕ್ರಿಶನ್ ಪಾಲ್‌ರ ಕೊಲೆ ಈ ಯೋಜನೆಯ ಒಂದು ಭಾಗವಾಗಿದೆ. ಇದು ತೀರಾ ಖಂಡನೀಯ ಎಂಬುದಾಗಿ ಸಿ.ಐ.ಟಿ ಯು ನ ದೆಹಲಿ ರಾಜ್ಯ ಸಮಿತಿ ತನ್ನ ಹೇಳಿಕೆಯಲ್ಲಿ ತಿಳಿಸಿದೆ.

○

ಪೂರ್ವವಲಯ

ವಿಮಾ ನೌಕರರ ಸಮ್ಮೇಳನ

ಪೂರ್ವವಲಯ ವಿಮಾ ನೌಕರರ 16ನೇ ಸಮ್ಮೇಳನವು ನವೆಂಬರ್ 25 ರಂದು ಕಲ್ಕತ್ತದಲ್ಲಿ ಸಮಾರೋಪಗೊಂಡಿತು. ಸಮ್ಮೇಳನದಲ್ಲಿ ಪಶ್ಚಿಮ ಬಂಗಾಳ, ಬಿಹಾರ, ಒರಿಸ್ಸಾ, ಅಸ್ಸಾಂ, ಮುಂತಾದ ರಾಜ್ಯಗಳ 14,230 ವಿಮಾ ನೌಕರರನ್ನು ಪ್ರತಿನಿಧಿಸುವ 212 ಪ್ರತಿನಿಧಿಗಳು ಭಾಗವಹಿಸಿದ್ದರು.

ಇದೀಗ ನಾಲಿಗೆ

ತಮ್ಮ ಬರ್ಬರ ಕ್ರೌರ್ಯದಿಂದ ಕುಖ್ಯಾತರಾದ ಬಿಹಾರ್‌ನ ಬಾಗಲ್ಪುರ ಪೋಲೀಸರು ಇದೀಗ ಇನ್ನೊಂದು ಹೆಜ್ಜೆ ಮುಂದಿಟ್ಟಿದ್ದಾರೆ. ಸೀತಾರಾಮ್ ಮಂಡಲ್ ಎಂಬ ನೀಗ್ರೋಯುವನೊಬ್ಬನನ್ನು ತಮ್ಮ ವಶಕ್ಕೆ ತೆಗೆದುಕೊಂಡು ಅಮಾನುಷವಾಗಿ ಥಳಿಸಿದ್ದರಿಂದ ಆತ ಸಾವನ್ನಪ್ಪಿದ. ಆತನ ಪತ್ನಿ ಹಾಗೂ ಗ್ರಾಮಸ್ಥರು ಸೀತಾರಾಮ ಮಂಡಲ್‌ನ ಶವವನ್ನು ಪಡೆದಾಗ ಮಂಡಲ್‌ನ ನಾಲಿಗೆಯನ್ನೇ ಕತ್ತರಿಸಿ ಹಾಕಿದ್ದು ಗೊತ್ತಾಯಿತು.

ತಮ್ಮ ಹೇಯ ಕೃತ್ಯವನ್ನು ಮುಚ್ಚಿಹಾಕಲು ಏನೇನೋ ಕತೆ ಕಟ್ಟುತ್ತಿದ್ದಾರೆ. ಈ ಪೈಶಾಚಿಕ, ಬರ್ಬರ ಕೃತ್ಯವನ್ನು ಸಮರ್ಥಿಸಿಕೊಳ್ಳಲು ಭ್ರಷ್ಟ ಜಗನ್ನಾಥ ಮಿಶ್ರಾ ಮುಂದಾದರೆ ಆಶ್ಚರ್ಯವೇನೂ ಇಲ್ಲ.

●

ಐಕ್ಯರಂಗ

ಚಂದಾ ವಿವರ

ವಾರ್ಷಿಕ ಚಂದಾ	30 ರೂ.
ಅರ್ಧ ವಾರ್ಷಿಕ ಚಂದಾ	15 ರೂ.

ನಿರುದ್ಯೋಗಸ್ಥರು !

(5ನೇ ಪುಟದಿಂದ)

ಸರಕಾರದ ಸ್ವಾಮ್ಯದಲ್ಲಿರುವ ಭೂಮಿಯನ್ನು ಭೂರಹಿತ ಕೃಷಿ ಕಾರ್ಮಿಕರಿಗೂ ಕಡಿಮೆ ಹಿಡುವಳಿ ಇರುವ ಬಡ ರೈತರಿಗೂ ಧರ್ಮಾರ್ಥವಾಗಿ ಮರು ವಿತರಣೆ ಮಾಡಬೇಕು. ಬಡ ಹಾಗೂ ಮಧ್ಯಮ ವರ್ಗದ ವ್ಯವಸಾಯಗಾರರಿಗೆ ಹೆಚ್ಚು ಪ್ರಮಾಣದಲ್ಲಿ ಸಾಲ, ಸಹಾಯ, ಗೊಬ್ಬರ, ಬೀಜ, ಯಂತ್ರೋಪಕರಣ, ನೀರಾವರಿ ಸೌಕರ್ಯಗಳನ್ನೊದಗಿಸಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಗುಡಿ ಕೈಗಾರಿಕೆ, ಸಾರಿಗೆ ಸಂಪರ್ಕ ಸೌಕರ್ಯ, ನೀರಾವರಿ, ವಿದ್ಯುತ್, ಶಾಲೆ, ಆಸ್ಪತ್ರೆ, ಇತ್ಯಾದಿ ಅಭಿವೃದ್ಧಿ ಯೋಜನೆಗಳನ್ನು ಅಧಿಕ ಸಂಖ್ಯೆಯಲ್ಲಿ ಕಾರ್ಯಗತಗೊಳಿಸಬೇಕು. ಗ್ರಾಮೀಣ ಋಣಭಾರವನ್ನು ರದ್ದು ಮಾಡಬೇಕು. ವ್ಯವಸಾಯಗಾರರ ಕೃಷಿ ಉತ್ಪಾದನೆಗಳಿಗೆ ಯೋಗ್ಯ ಬೆಲೆ ಸಿಗುವಂತಾಗಬೇಕು. ಕೃಷಿ ಕ್ಷೇತ್ರದಲ್ಲಿ, ಗ್ರಾಮೀಣ ಪ್ರದೇಶಗಳಲ್ಲಿ ಆಧುನಿಕ ವಿಜ್ಞಾನ ತಂತ್ರಜ್ಞಾನಗಳನ್ನು ಹೆಚ್ಚು ಹೆಚ್ಚಾಗಿ ಬಳಸಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಹೊಸ ಉದ್ಯೋಗಾವಕಾಶಗಳನ್ನು ಹೆಚ್ಚಿಸಲು ಹೆಚ್ಚುವರಿ ಆಹಾರ ಧಾನ್ಯಗಳನ್ನೇ ಕೂಲಿಯ ರೂಪದಲ್ಲಿ ಕೊಡುವುದು (forces for work).

2. ಗ್ರಾಮೀಣ ಪ್ರದೇಶಗಳಿಂದ ಈಗಲೇ ನಗರ ಪ್ರದೇಶಗಳಿಗೆ ಭಾರೀ ಪ್ರಮಾಣದಲ್ಲಿ ಉದ್ಯೋಗಾಕಾಂಕ್ಷಿಗಳಾಗಿ ವಲಸೆ ಹೋದವರಿಗೆ ಪೂರ್ಣ ಪ್ರಮಾಣದಲ್ಲಿ ಉದ್ಯೋಗಾವಕಾಶಗಳನ್ನು ಒದಗಿಸಲು ಬೃಹತ್ ಪ್ರಮಾಣದಲ್ಲಿ ಜನಬಳಕೆಗೆ ಬೇಕಾದ ಸಾಮಗ್ರಿಗಳನ್ನು ಉತ್ಪಾದಿಸುವ ಸಣ್ಣ, ಮಧ್ಯಮ, ಹಗುರ ಕೈಗಾರಿಕೆಗಳನ್ನು ಸರ್ವತ್ರ ಸ್ಥಾಪಿಸಬೇಕು. ಖಾಸಗಿ ಏಕಸ್ವಾಮ್ಯದಲ್ಲಿರುವ ಬೃಹತ್ ಕೈಗಾರಿಕೋದ್ಯಮಗಳನ್ನೂ, ವ್ಯಾಪಾರ ವಾಣಿಜ್ಯವನ್ನೂ ರಾಷ್ಟ್ರೀಕರಿಸಬೇಕು. ರಾಷ್ಟ್ರೀಯ ಸಮಗ್ರ ಆರ್ಥಿಕ ಅಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡು — ಖಾಸಗಿ ಲಾಭದೃಷ್ಟಿಯಲ್ಲ—ಈ ಬೃಹತ್ ಕೈಗಾರಿಕೆಗಳ ವಿಸ್ತರಣಾ ಕಾರ್ಯ ಕೈಕೊಳ್ಳಬೇಕು. ಸ್ವದೇಶಿ ತಂತ್ರಜ್ಞಾನವನ್ನೇ ಹೆಚ್ಚಾಗಿ ಬಳಸಬೇಕು. ರಕ್ಷಣಾ ಕೈಗಾರಿಕೆಗಳ ಬದಲು ನಾಗರಿಕ ಕೈಗಾರಿಕೆಗಳಿಗೆ ಹೆಚ್ಚು ಪ್ರೋತ್ಸಾಹ ನೀಡಬೇಕು. ರಫ್ತು ಆಮದಿನ ವಿದೇಶಿ ವ್ಯಾಪಾರಕ್ಕಿಂತ ಆಂತರಿಕ ಮಾರುಕಟ್ಟೆಯನ್ನೇ ಆರ್ಥಿಕ ಅಭಿವೃದ್ಧಿಗೆ ಅವಲಂಬಿಸಬೇಕು. ವಿದೇಶಿ ಸಾಲ ಸೌಲಭ್ಯಗಳನ್ನು ಅವಲಂಬಿಸದೆ, ಸ್ವದೇಶಿ ಸಂಪನ್ಮೂಲಗಳನ್ನೇ ಹೆಚ್ಚಾಗಿ ಬಳಸಬೇಕು. ಜೀವನಾವಶ್ಯಕ ವಸ್ತುಗಳನ್ನು ರಾಷ್ಟ್ರವ್ಯಾಪಿ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಒದಗಿಸಬೇಕು. ಅಪ್ರತ್ಯಕ್ಷ ತೆರಿಗೆ, ಕೊರತೆ ಹಣ ಸೃಷ್ಟಿಯ ಮಾರ್ಗ ಕೈಬಿಟ್ಟು ಸಂಪತ್ತು ಮತ್ತು ಆದಾಯಗಳ ಮೇಲಿನ ನೇರ ತೆರಿಗೆಯ ಮಾರ್ಗವನ್ನೇ ಅವಲಂಬಿಸಬೇಕು.

(3) ಶಿಕ್ಷಣ ಪದ್ಧತಿಯು ಉದ್ಯೋಗಾವಕಾಶಕ್ಕನುಗುಣವಾಗಿರಬೇಕು. ಮುಖ್ಯವಾಗಿ ವೃತ್ತಿ ಶಿಕ್ಷಣಕ್ಕೆ ಪ್ರಾಶಸ್ತ್ಯ ನೀಡಬೇಕು. ಕೆಳಮಟ್ಟದಲ್ಲಿ ಪ್ರಾಥಮಿಕ ಹಾಗೂ ಹೈಸ್ಕೂಲ್ ವರೆಗಿನ ಶಿಕ್ಷಣಕ್ಕೇ ಹೆಚ್ಚು ಪ್ರಾಶಸ್ತ್ಯ ನೀಡಬೇಕು. ಶಿಕ್ಷಣ, ಉದ್ಯೋಗ ಪರಸ್ಪರ ಜೊತೆ ಜೊತೆಗೇ ಇರಬೇಕು. ಶಿಕ್ಷಣಕ್ಕಾಗಿ ಶಿಕ್ಷಣವಾಗಿರದೆ, ಶಿಕ್ಷಣ ಸೂಕ್ತ ಉದ್ಯೋಗಕ್ಕನುಗುಣವಾಗಿರಬೇಕು.

●

ಚುನಾವಣಾ ಘೋಷಣೆ

(4ನೇ ಪುಟದಿಂದ)

ಈ ಗಂಭೀರ ಸಮಸ್ಯೆಯನ್ನು ಪರಿಹರಿಸಲು ತನ್ನ ಪಕ್ಷದ ಉಪಾಯವೇನೆಂಬುದನ್ನು ಉಲ್ಲೇಖಿಸಿರುವುದಿಲ್ಲ.

ಹರಿಜನ-ಗಿರಿಜನರಿಗೆ, ಆರ್ಥಿಕವಾಗಿ ಹಿಂದುಳಿದವರಿಗೆಲ್ಲ ಹಿಂದೆಂದಿಗಿಂತಲೂ ಈಗ ಉತ್ತಮ ಅವಕಾಶಗಳಿವೆಯೆಂದು ಘೋಷಣೆ ಹೇಳುತ್ತದೆ. ದೇಶಾದ್ಯಂತ ಹರಿಜನ-ಗಿರಿಜನರ ಮೇಲೆ ದಬ್ಬಾಳಿಕೆ ನಡೆಯುತ್ತಲೇ ಇದೆ; ಹರಿಜನ ಮಹಿಳೆಯರ ಮಾನಭಂಗವಾಗುತ್ತಿದೆ. ಮಹಿಳೆಯರನ್ನೂ ಮಕ್ಕಳನ್ನೂ ಸುಟ್ಟು ಹಾಕಲಾಗುತ್ತಿದೆ. ಸರ್ವಸಾಮಾನ್ಯವಾಗಿ ಸಮಾಜದಲ್ಲಿಯು ಈ ವರ್ಗ ಆರ್ಥಿಕವಾಗಿಯೂ, ಸಾಮಾಜಿಕವಾಗಿಯೂ ಮುಂದೆ ಬರಲು ಅವಕಾಶಗಳೇ ಸಿಗುತ್ತಿಲ್ಲ. ಹಲವು ವಿಧಗಳಿಂದ ಅವರನ್ನು ತುಳಿಯಲಾಗುತ್ತಿದೆ. ಆದ್ದರಿಂದ ಮೋಸ ಮಾಡಿ ಮತಗಳಿಸುವ ಅಂಶವಷ್ಟೇ ಇದಾಗಿದೆ.

ಪತ್ರಿಕೆಗಳನ್ನು ಮೊಟಕುಗೊಳಿಸುವ, ಅವುಗಳ ಸ್ವಾತಂತ್ರ್ಯ ಹಕ್ಕನ್ನು ನಾಶಮಾಡುವ ಬಿಹಾರ್ ಪ್ರೆಸ್ ಕಾನೂನುಗಳಂತ ಕ್ರಮಗಳ ಕುರಿತು ಇಂದಿರಾ ಪಕ್ಷದ ಚುನಾವಣಾ ಘೋಷಣೆ ಮೌನ ತಾಳಿದೆ.

20 ಕೋಟಿ ಜನರಿಗೆ 1985ರೊಳಗೆ ಕೆಲಸಕೊಡಿಸಲಾಗುವುದೆಂದು ಹೇಳಲಾಗಿದೆ. ಆದರೆ 35 ವರ್ಷದ ತನ್ನ ಪಕ್ಷದ ಆಡಳಿತೆಯಲ್ಲಿ, ಹಾಗೆಯೇ 1980 ರಿಂದ ಈಚಿನ ಮೂರು ವರ್ಷಗಳಲ್ಲಿ ನಿರುದ್ಯೋಗಿಗಳ ಸಮಸ್ಯೆ ಬಗೆಹರಿಸಲು 20 ಅಂಶಗಳ ಕಾರ್ಯಕ್ರಮದಲ್ಲಿ ಏನು ಸಾಧಿಸಿದ್ದೇವೆಂಬುದನ್ನು ಇಂದಿರಾ ಕಾಂಗ್ರೆಸ್ ಹೇಳಿರುವುದಿಲ್ಲ. ಬೆಲೆಯೇರಿಕೆಯಂತೆಯೇ ನಿರುದ್ಯೋಗಿಗಳ ಸಂಖ್ಯೆಯೂ ದಿನದಿನಕ್ಕೂ ಹೆಚ್ಚಾಗುತ್ತಿರುವಾಗ, ಕಳೆದ ಮೂರು ವರ್ಷಗಳಲ್ಲಿ ಈ ಸಮಸ್ಯೆಯ ಪರಿಹಾರಕ್ಕೆ ಒಂದೇ ಒಂದು ಕಾರ್ಯಕ್ರಮವನ್ನೂ ಜ್ಯಾರಿಯಲ್ಲಿ ತಾರದಿದ್ದಾಗ ಚುನಾವಣೆಯ ಘೋಷಣೆಯಲ್ಲಿ ಈ ಪ್ರಸ್ತಾಪ ಯುತ್ತಾ ಯಾನ ನಿರುದ್ಯೋಗಿಯೂ ಗಮನ ಹರಿಸುವುದಿಲ್ಲೆಂಬುದು ಶತಸಿದ್ಧ.

ತುಮಕೂರು :

ಬೇಡಿಕೆ ಸಪ್ತಾಹ

ಕರ್ನಾಟಕ ರಾಜ್ಯದ ಖಾಸಗಿ ಸೆಕೆಂಡರಿ ಶಾಲಾ ನೌಕರರು ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಒಂದು ವಾರದ ಕಾಲ ಕಪ್ಪು ಬ್ಯಾಡ್ಜ್ ಧರಿಸಿ ಸಾರ್ವಜನಿಕರ ಗಮನ ಸೆಳೆದರು.

ಇದರ ಅಂಗವಾಗಿ ತಾ. 3-12-82 ರಂದು ಸಂಜೆ ಶ್ರೀಮತಿ ಸಾವಿತ್ರಮ್ಮನವರ ಕಲ್ಯಾಣ ಮಂದಿರದ ಮುಂಭಾಗದಲ್ಲಿ ತಮ್ಮ ಬೇಡಿಕೆಗಳನ್ನು ಬೆಂಬಲಿಸಲು ವಿವಿಧ ಪಕ್ಷಗಳ ಮುಖಂಡರುಗಳನ್ನು ಆಹ್ವಾನಿಸಿ ಬಹಿರಂಗ ಸಭೆ ನಡೆಸಲಾಯಿತು. ಶ್ರೀ ದ್ಯಾವಣ್ಣನವರ ಸ್ವಾಗತ ಭಾಷಣದೊಡನೆ ಪ್ರಾರಂಭವಾದ ಸಭೆಯಲ್ಲಿ ತುಮಕೂರು ಜಿಲ್ಲಾ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿಗಳಾದ ಶ್ರೀ ಕೆ.ಆರ್. ನಾಯಕ್‌ರವರು ಅಧ್ಯಾಪಕರ ನೌಕರರ ನ್ಯಾಯೋಚಿತವಾದ ಬೇಡಿಕೆಗಳು ಈಡೇರಬೇಕೆಂದು ಈ ಬೇಡಿಕೆಗಳ ಈಡೇರಿಕೆಗಾಗಿ ಇತರೆ ಕಾರ್ಮಿಕರ ಎಲ್ಲಾ ರೀತಿಯ ಬೆಂಬಲ ದೊರಕಿಸಿಕೊಡುವುದಾಗಿ ಆಶ್ವಾಸನೆ ಇತ್ತರು. ಊರ್ಡಿಗೆರೆ ಹೈಸ್ಕೂಲ್ ಮುಖೋಪಾಧ್ಯಯರಾದ ಸೂರ್ಯನಾರಾಯಣಚಾರ್‌ರವರು ಮಾತನಾಡಿದರು. ಸಂಘದ ಕಾರ್ಯದರ್ಶಿಗಳಾದ ಶ್ರೀ ಯತಿರಾಜ್‌ರವರು ಅಧ್ಯಾಪಕರು ಮತ್ತು ನೌಕರರು ತಮ್ಮ ಬೇಡಿಕೆಗಳ ಜೊತೆಗೆ ಸಾಮಾಜಿಕ ಬದಲಾವಣೆಗೆ ಶ್ರಮಿಸಬೇಕೆಂದು ಕರೆ ಕೊಟ್ಟರು.

ಸಭೆಯ ಅಧ್ಯಕ್ಷತೆಯನ್ನು ತುಮಕೂರಿನ ಕಾಳಿದಾಸ ಜ್ಯೂನಿಯರ್ ಕಾಲೇಜಿನ ಪ್ರಿನ್ಸಿಪಾಲರಾದ ಕೆ. ಸಿ. ರಾಮಯ್ಯನವರು ವಹಿಸಿದ್ದರು. ಶ್ರೀ ಸದಾನಂದರವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ಪುರಸಭಾ ಚುನಾವಣೆ

ತುಮಕೂರು ಜಿಲ್ಲೆಯ ಶಿರಾ ಟೌನ್ ಪುರಸಭಾ ಉಪ ಚುನಾವಣೆಯು ಇದೇ ತಿಂಗಳು 22 ರಂದು ನಡೆಯಲಿದ್ದು ಚುನಾವಣೆಯಲ್ಲಿ ಆರು ಜನ ಉಮೇದುವಾರರು ಸ್ಪರ್ಧಿಸಿದ್ದಾರೆ. ತುಮಕೂರು ಜಿಲ್ಲಾ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಶಿರಾ ಟೌನ್ ಶಾಖೆಯ ಕಾರ್ಯದರ್ಶಿಗಳಾದ ಕಾಂ| ಎಸ್. ಕೆ. ಹಬೀಬುಲ್ಲಾರವರು ಪಾರ್ಟಿಯ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾರೆ.

●

ಸಂತಾಪ

ರೈತ ಸಂಘ ನೂಜಾಡಿ ಗ್ರಾಮ ಸದಸ್ಯರಾದ ಶ್ರೀ "ಮೊಗದೀರ"ರು ತಾ|| 29-11-82 ರಂದು ಅನಾರೋಗ್ಯದಿಂದ ನಿಧನರಾಗಿರುವುದಕ್ಕೆ ಕುಂದಾಪುರ ತಾಲ್ಲೂಕು ಸಮಿತಿ ಸಂತಾಪ ವ್ಯಕ್ತಪಡಿಸುವುದರೊಂದಿಗೆ ಅವರ ಕುಟುಂಬದವರ ದುಃಖದಲ್ಲಿ ಪಾಲ್ಗೊಳ್ಳುತ್ತದೆ.

ಕೋಣಿ :

ಡಿ.ವೈ.ಎಫ್.ಐ. ಆಶ್ರಯದಲ್ಲಿ ವಿಚಾರಗೋಷ್ಠಿ

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ (ಡಿ.ವೈ.ಎಫ್.ಐ.) ಕೋಣಿ ಗ್ರಾಮ ಸಮಿತಿಯ ನೇತೃತ್ವದಲ್ಲಿ ದಿನಾಂಕ 12-12-82 ರಂದು ಕೋಣಿ ಪಂಚಾಯತ್ ಕಚೇರಿ ವಠಾರದಲ್ಲಿ "ಇಂದಿನ ಶಿಕ್ಷಣ ಪದ್ಧತಿ" ಮತ್ತು "ನಿರುದ್ಯೋಗ ಸಮಸ್ಯೆ" ಎಂಬ ವಿಷಯಗಳ ಮೇಲೆ ವಿಚಾರಗೋಷ್ಠಿಯೊಂದನ್ನು ಏರ್ಪಡಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಕೆ. ರಾಜೇಂದ್ರ ಉಡುಪ, ಅಧ್ಯಾಪಕ ಕೆ.ಆರ್.ಇ.ಸಿ.ಸುರತ್ಕಲ್ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾದ ಶ್ರೀ ಮಹಾಬಲ ವಡೇರ ಹೊಬಳಿ, ಉಪಾಧ್ಯಕ್ಷ ಡಿ.ವೈ.ಎಫ್.ಐ. ರಾಜ್ಯ ಸಮಿತಿ ಇವರು ಯುವಜನ ಫೆಡರೇಶನ್‌ನ ಧ್ಯೇಯೋದ್ದೇಶಗಳನ್ನು ಸಭೆಗೆ ವಿವರಿಸಿದರು. ಯುವಜನತೆ ಸಂಘಟಿತರಾಗಬೇಕೆಂದು ಕರೆ ಇತ್ತರು.

ಕುಂದಾಪುರ ಭಂಡಾರ್‌ಕಾರ್ಸ್ ಕಾಲೇಜಿನ ವಿದ್ಯಾರ್ಥಿ ಶ್ರೀ ಕೆ. ವಿಶ್ವನಾಥ ಇವರು "ನಿರುದ್ಯೋಗ ಸಮಸ್ಯೆ" ಎಂಬ ವಿಷಯದ ಮೇಲೆ ಪ್ರಬಂಧ ಮಂಡಿಸಿದರು.

ಬಸ್ರೂರು ಶ್ರೀ ಶಾರದ ಕಾಲೇಜು ವಿದ್ಯಾರ್ಥಿ ಶ್ರೀ ಎಂ. ಬಾಲಕೃಷ್ಣ ಸೆಟ್ಟಿ ಇವರು "ಇಂದಿನ ಶಿಕ್ಷಣ ಪದ್ಧತಿ" ವಿಷಯದ ಮೇಲೆ ಪ್ರಬಂಧ ಓದಿದರು.

ಆರಂಭದಲ್ಲಿ ಶ್ರೀ ಕೆ.ಆನಂದ ಭಂಡಾರಿ ಅಧ್ಯಕ್ಷ ಡಿ. ವೈ. ಎಫ್. ಐ ಕೋಣಿ ಇವರು ಸಭಿಕರನ್ನು ಸ್ವಾಗತಿಸಿದರು. ಶ್ರೀ ಕೆ. ನಾರಾಯಣ ಆಚಾರ್ ಕಾರ್ಯದರ್ಶಿ ಇವರು ಸಭೆಗೆ ವಂದಿಸಿದರು.

ಕುಂದಾಪುರ :

ರಾಜಕೀಯ ಪ್ರಚಾರ ಜಾಥಾ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ತೀರ್ಮಾನದಂತೆ ಕುಂದಾಪುರದಲ್ಲಿ "ರಾಜಕೀಯ ಪ್ರಚಾರ ಜಾಥಾ" ಕಾರ್ಯಕ್ರಮವು ನವೆಂಬರ್ 26 ರಿಂದ ಡಿಸೆಂಬರ್ 3ರ ವರೆಗೆ ನಡೆಯಿತು.

ಇಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಪಕ್ಷವು ವಹಿಸುತ್ತಿರುವ ಪಾತ್ರವನ್ನು ಜನರಿಗೆ ವಿವರಿಸಲು ರಾಜಕೀಯ ಪ್ರಚಾರ ಜಾಥಾಗಳನ್ನು ಸಂಘಟಿಸಲಾಗಿದ್ದು, ಈ ಸಂದರ್ಭದಲ್ಲಿ ಪಕ್ಷದ ಸದಸ್ಯರು ಮತ್ತು ಕಾರ್ಮಿಕರು ತಾಲ್ಲೂಕಿನ ಹೆಚ್ಚಿನ ಪ್ರದೇಶಗಳಿಗೆ ಹೋಗಿ ಕರಪತ್ರ ಹಂಚುವುದರೊಂದಿಗೆ ಮತ್ತು ಪುಸ್ತಕ ಮಾರಾಟ ಮಾಡುವುದರೊಂದಿಗೆ ಜನಸಾಮಾನ್ಯರ ಸಂಪರ್ಕ ಬೆಳೆಸಲು ಪ್ರಯತ್ನಿಸಿದ್ದಾರೆ.

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ದ ಕುಂದಾಪುರ ತಾಲ್ಲೂಕು ಸಮಿತಿಯ ಆಶ್ರಯದಲ್ಲಿ ಮುಖ್ಯ ಕೇಂದ್ರಗಳಾದ ಬೈಂದೂರು, ನಾವುಂದಾ, ಉಪ್ಪುಂದ, ಅರೆಶಿರೂರು, ಕೊಲ್ಲೂರು, ಜಡ್ಕಲ್, ಮುದ್ದೂರು, ಗೋಳಿ ಅಂಗಡಿ, ಹಾಲಾಡಿ, ಮಾರ್ನಕಟ್ಟೆ, ಚಿತ್ತೂರು, ಸಿದ್ಧಾಪುರ, ನೇರಳಕಟ್ಟೆ, ಅಂಪಾರ್, ಗುಲ್ವಾಡಿ, ಸಾಸ್ತಾನ, ಸಾಲಿಗ್ರಾಮ, ಕೋಟ, ತೆಕ್ಕಟ್ಟೆ, ಕಂಡ್ಲೂರು, ಬಸ್ರೂರು,ಕೋಣಿ ಮತ್ತು ಕೊಡೇಶ್ವರ, ಈ ಪ್ರದೇಶಗಳಲ್ಲಿ ಸಾರ್ವಜನಿಕ ಸಭೆಗಳು, ನಡೆದಿವೆ. ರೈತ-ಕಾರ್ಮಿಕ ಮುಂದಾಳುಗಳಾದ ವಿ. ಮಹಾಬಲ ವಡೇರ ಹೋಬಳಿ, ಶಿವಾನಂದ ಕೋಡಿ, ಸಿ. ನಾರಾಯಣ, ಕೆ. ಶಂಕರ್ ಮತ್ತು ಅಬ್ರಹಾಂ ಕರ್ಕಡರವರು ಸಾರ್ವಜನಿಕ ಸಭೆಗಳಲ್ಲಿ ಮಾತನಾಡಿದರು.

ನವೆಂಬರ್ 3 ರಂದು ಕುಂದಾಪುರ ಶಾಸ್ತ್ರೀ ಪಾರ್ಕಿನ ಬಳಿ ಸಂಜೆ 5 ಗಂಟೆಗೆ ಬೃಹತ್ ಸಾರ್ವಜನಿಕ ಸಭೆ ಜರಗಿತು. ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳಿಂದ ರೈತರು-ಕೃಷಿ ಕೂಲಿಗಾರರು ಹಾಗೂ ಹಂಚಿನ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಮೆರವಣಿಗೆಯಲ್ಲಿ ಸಭಾಸ್ಥಳಕ್ಕೆ ಬಂದಿದ್ದರು.

ಪಕ್ಷದ ಮುಂದಾಳುಗಳಾದ ಕಾಂ| ಡೇವಿಡ್ ಕರ್ಕಡ ಕಾಂ| ಕೆ ಶಂಕರ್, ಕಾಂ| ಬಿ. ಮಾಧವನವರು ಮಾತನಾಡಿದರು.

ಪ. ಬಂಗಾಲ ಉಪ ಚುನಾವಣೆಯಲ್ಲಿ ಸಿ. ಪಿ. ಐ. (ಎಂ) ಗೆಲುವು

5-12-82 ರಂದು ಪ. ಬಂಗಾಳದ ಮೊಯ್ನಾ ವಿಧಾನ ಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಸಿ. ಪಿ. ಐ. (ಎಂ) ಅಭ್ಯರ್ಥಿ ಕಾಂ| ಪುಲಿನ್ ಬೇರಾ ತಮ್ಮ ಕಾಂಗ್ರೆಸ್ [ಐ] ಪ್ರತಿ ಸ್ಪರ್ಧಿಯನ್ನು 9,746 ಮತಗಳ ಅಂತರದಿಂದ ಪರಾಭವಗೊಳಿಸಿ ಆಯ್ಕೆಯಾಗಿದ್ದಾರೆ.

19-12-82 ರಂದು ಪ. ಬಂಗಾಳದ ಮಥುರಾಪುರ ಲೋಕ ಸಭಾ ಉಪ ಚುನಾವಣೆಯಲ್ಲಿ ಸಿ ಪಿ. ಐ. (ಎಂ)ನ ಅಭ್ಯರ್ಥಿ ಕಾಂ| ನಿರ್ಮಲ್ ಸಿನ್ಹಾ ಅವರು ತಮ್ಮ ಕಾಂಗ್ರೆಸ್ ಪ್ರತಿಸ್ಪರ್ಧಿಯನ್ನು 65,474 ಮತಗಳ ಅಂತರದಿಂದ ಸೋಲಿಸಿ ಆಯ್ಕೆಯಾಗಿದ್ದಾರೆ.

ತ್ರಿಪುರಾ:

ಕಾಂಗ್ರೆಗೆ ಮುಖಭಂಗ ಶತಃಸಿದ್ಧ

ಈಶಾನ್ಯ ವಲಯದ ಪುಟ್ಟ, ಸುಂದರ ರಾಜ್ಯವಾದ ತ್ರಿಪುರದಲ್ಲಿ ಜನವರಿ 5, 1983 ರಂದು ನಡೆಯಲಿರುವ ವಿಧಾನ ಸಭಾ ಚುನಾವಣೆಗಳಲ್ಲಿ ತ್ರಿಪುರ ಜನತೆ ಕಾಂಗ್ರೆಗೆ ಮಣ್ಣು ಮುಕ್ಕಿಸಲು ಸಿದ್ಧ ರಾಗುತ್ತಿದ್ದಾರೆ. ಈಶಾನ್ಯ ವಲಯದ ಈ ರಾಜ್ಯದ ಎಡರಂಗ ಸರಕಾರದ ನೇತೃತ್ವದಡಿ ಗುಡ್ಡಗಾಡು ಮತ್ತು ಇತರ ಜನತೆ ಸೌಹಾರ್ಧತೆಯಿಂದ ಜೀವಿಸುತ್ತಿದ್ದಾರೆ. ಕಾಂಗ್ರೆ, ಎಡ ರಂಗವನ್ನು ಸೋಲಿಸಲು ಪ್ರತ್ಯೇಕತಾ ವಾದಿ ಸಂಘಟನೆಯಾದ ತ್ರಿಪುರ ಉಪ ಜಾತಿ ಜುಬಾ ಸಮಿತಿ (TUJS) ಒಟ್ಟಿಗೆ ಅಪವಿತ್ರ ಮೈತ್ರಿ ಮಾಡಿ ಕೊಂಡಿದೆ. ಅಷ್ಟೇ ಅಲ್ಲ ಇನ್ನೊಂದು ಪ್ರತ್ಯೇಕತಾವಾದಿ "ಅಮ್ರುಬಂಗಾಲಿ" ಯೊಟ್ಟಿಗೂ ಕೈಗೂಡಿಸಿದೆ.

ರಾಜ್ಯದ ಒಟ್ಟು 60 ವಿಧಾನಸಭಾ ಕ್ಷೇತ್ರಗಳಲ್ಲಿ ಎಡರಂಗದ ನೇತೃತ್ವದಲ್ಲಿ ಸಿ. ಪಿ. ಐ. (ಎಂ) ಒಟ್ಟು 54 ಸ್ಥಳ ಗಳಲ್ಲಿ ಸ್ಪರ್ಧಿಸುತ್ತಿದೆ. ಹಾಗೂ ಇಬ್ಬರು ಸ್ವತಂತ್ರ ಅಭ್ಯರ್ಥಿಗಳನ್ನೂ ಬೆಂಬಲಿಸು ತ್ತಿದೆ. ಆರ್. ಎಸ್. ಪಿ -2, ಸಿ. ಪಿ. ಐ.-1, ಫಾರ್ವರ್ಡ್ ಬ್ಲಾಕ್-1 ಸ್ಥಳಗಳಲ್ಲಿ ಸ್ಪರ್ಧಿಸುತ್ತಿದೆ.

ಡಿಸೆಂಬರ್ 3 ರಂದು ಅಗರ್ತಲಾದಲ್ಲಿ ಪಕ್ಷದ ಕಾರ್ಯಕರ್ತರನ್ನುದ್ದೇಶಿಸಿ ಕಾಂ| ಇ. ಎಂ. ಎಸ್. ನಂಬೂದ್ರಿಪಾಡ್ ಅವರು ಮಾತನಾಡಿ ತಮ್ಮೆಲ್ಲಾ ಶಕ್ತಿ ಸಾಮರ್ಥ್ಯಗಳನ್ನು ವಿನಿಯೋಗಿಸಿ ಎಡ ರಂಗದ ವಿಜಯಕ್ಕೆ ಶ್ರಮಿಸಬೇಕೆಂದು ಮನವಿ ಮಾಡಿದರು. ಇದೇ ಸಂದರ್ಭ ದಲ್ಲಿ ಶತ್ರುಗಳ ಶಕ್ತಿಯನ್ನು ಕಡೆಗೋಣಿ ಸಬಾರದಾಗಿಯೂ ಅವರು ತಿಳಿಸಿದರು. ಜನತೆಯನ್ನು ಪ್ರಚೋದಿಸಲು, ದಾರಿ ತಪ್ಪಿಸಲು ಕಾಂಗ್ರೆ-ಟಿ.ಯು.ಜೆ.ಎಸ್. ಕೂಡಿ ಶ್ರಮಿಸುತ್ತಿರುವುದನ್ನೂ ಗಮ ನಿಸಬೇಕೆಂದು ಅವರು ನುಡಿದರು. ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಸಿ. ಪಿ. ಐ. (ಎಂ) ಕೇಂದ್ರ ಸಮಿತಿಯ ಸದಸ್ಯ, ತ್ರಿಪುರದ ಶೈಕ್ಷಣಿಕ ಮಂತ್ರಿ ಕಾಂ| ದಶರಥದೇಬ್ ಅವರು ಮಾತ ನಾಡಿ ಎಡರಂಗ ಸರಕಾರದ ಸಾಧನೆ ಗಳನ್ನು ಜನತೆಗೆ ಬಿಂಬಿಸಲು ಮತ್ತು ಸರ್ವಾಧಿಕಾರಿ-ಪ್ರತ್ಯೇಕತಾವಾದಿ ಶಕ್ತಿ ಗಳನ್ನು ಸೋಲಿಸಲು ಶ್ರಮಿಸಲು ಕರೆ ನೀಡಿದರು.

ಪ್ರಮೋದ್‌ರಿಗೆ ಶ್ರದ್ಧಾಂಜಲಿ:

ನವ್ವೆಂಬರ್ 29 ರಂದು ಬೀಜಿಂಗ್ ನಲ್ಲಿ ನಿಧನರಾದ ಕಾಂ|| ಪ್ರಮೋದ್‌ರಿಗೆ ಶ್ರದ್ಧಾಂಜಲಿ ಸಲ್ಲಿಸಿ ಸಭೆ ಒಂದು ನಿಮಿಷ ಮೌನವನ್ನಾಚರಿಸಿತು. 1977 ರಲ್ಲಿ ಎಡರಂಗ ಸರಕಾರದ ಭಾರೀ ವಿಜ ಯಕ್ಕೆ ಅಮೂಲ್ಯ ಮಾರ್ಗದರ್ಶನ, ಸಲಹೆ ನೀಡಿದ್ದ ಕಾಂ|| ಪ್ರಮೋದ್ ನಮ್ಮೊಟ್ಟಿಗೆ ಇಲ್ಲದಿರುವ ಈ ಸಂದರ್ಭ ದಲ್ಲಿ, ಎಡರಂಗದ ಭಾರೀ ವಿಜಯಕ್ಕೆ ಶ್ರಮಿಸುವುದು ಆ ಮಹಾನ್ ಧುರೀಣ ನಿಗೆ ಸೂಕ್ತ ಶ್ರದ್ಧಾಂಜಲಿ ಸಲ್ಲಿಸಿದಂತೆ ಎಂದು ಕಾಂ|| ಇ. ಎಂ. ಎಸ್. ನುಡಿ ದರು.

ನೃಪೇನ್‌ರ ಮನವಿ:

ಅದೇ ದಿನ (ಡಿಸೆಂಬರ್ 3) ಯೋ ಗೇಂದ್ರ ನಗರದಲ್ಲಿ ಭಾರೀ ರ್‍ಯಾಲಿಯ ನ್ನುದ್ದೇಶಿಸಿ ಮುಖ್ಯಮಂತ್ರಿ ನೃಪೇನ್ ಚಕ್ರವರ್ತಿಯವರು ಮಾತನಾಡಿ, ಎಡ ರಂಗದ ಎಲ್ಲಾ ಅಭ್ಯರ್ಥಿಗಳನ್ನು ಬಹು ಮತದಿಂದ ಚುನಾಯಿಸುವಂತೆ ಜನತೆಗೆ ಮನವಿ ಮಾಡಿದರು. ಸರ್ವಾಧಿಕಾರೀ ಮತ್ತು ಪ್ರತ್ಯೇಕತಾವಾದಿ ಶಕ್ತಿಗಳಿಗೆ ತಕ್ಕ ಪಾಠ ಕಲಿಸುವುದು ಅತ್ಯವಶ್ಯ ಎಂದು ನುಡಿದ ಅವರು, ತ್ರಿಪುರಾದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿ ಸಿದ ಎಡರಂಗ ಸರಕಾರವನ್ನು ಮತ್ತೆ ಅಧಿಕಾರಕ್ಕೆ ತರುವಂತೆ ಕೇಳಿಕೊಂಡರು.

ಕಾಂಗ್ರೆ 46 ಸ್ಥಾನಗಳಿಗೆ ಮತ್ತು ಟಿ. ಯು. ಜೆ. ಎಸ್. 14 ಸ್ಥಾನಗಳಲ್ಲಿ ಸ್ಪರ್ಧಿಸುತ್ತಿದೆ.

ರಾಜ್ಯ ಸಮಿತಿ ಖಂಡನೆ

ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿಯು ಈ ತಿಂಗಳ 11 ರಂದು 'ಸುಧಾ' ವಾರ ಪತ್ರಿಕೆಯ ಶ್ರೀ ಗಂಗಾಧರ ಮೊದಲಿಯಾರ್ ಅವರನ್ನು ಅಪಹರಿಸಿದ್ದನ್ನು ಮತ್ತು ಮಂಗಳೂರಿಗೆ ಹೋಗುತ್ತಿದ್ದ 'ಪ್ರಜಾ ವಾಣಿ' ಪತ್ರಿಕೆಯ ವಾಹನದ ಮೇಲೆ ಧಾಳಿ ನಡೆಸಿದ ಪ್ರತಿಗಳನ್ನು ಸುಟ್ಟು ಹಾಕಿದ್ದನ್ನು ತೀವ್ರವಾಗಿ ಖಂಡಿಸಿದೆ.

ಪತ್ರಿಕಾ ಸ್ವಾತಂತ್ರ್ಯದ ಮೇಲಿನ ಧಾಳಿ ಗುಂಡೂರಾವ್ ಸರ್ಕಾರದಡಿ ಯಲ್ಲಿ ಹೆಚ್ಚುತೊಡಗಿದೆಯೆಂದು ಪ್ರಕ ಟಣೆ ತಿಳಿಸಿದೆ.

ಪ್ರಚಾರದ ಒಳನೋಟ

(1ನೇ ಪುಟದಿಂದ)

ಮಾಡುವ ಅಗತ್ಯವೇನಿತ್ತು ಎಂಬು ದನ್ನು ಇಂದಿರಾ ಗಾಂಧಿ ತಿಳಿಸಲಿಲ್ಲ.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯ ನೇತೃತ್ವದಲ್ಲಿರುವ ಪಶ್ಚಿಮ ಬಂಗಾಳ ಸರಕಾರ ರವೀಂದ್ರನಾಥ್ ಠಾಗೋರ್‌ರವರ ಪಾಠಗಳನ್ನು ತೆಗೆದು ಹಾಕಿದೆಂಬ ಆರೋಪ ಸುಳ್ಳಾಗಿರುತ್ತದೆ. ಇಂದಿರಾ ಗಾಂಧಿಯವರೇ 1975ರ ತುರ್ತು ಪರಿಸ್ಥಿತಿಯ ಕಾಲದಲ್ಲಿ ಠಾಗೋರರವರ ಲೇಖನ, ನಾಟಕಗಳನ್ನು ಪ್ರಕಟಿಸಲು, ಆಡಿ ತೋರಿಸಲು ಪ್ರತಿ ಬಂಧ ಹೇರಿದ್ದಾರೆಂಬ ವಿಷಯವನ್ನು ನೆನೆಸಿಕೊಳ್ಳದಿರುವುದು ಆಶ್ಚರ್ಯಕರ.

ಇಂದಿರಾರವರ ಪ್ರಥಮ ಹಂತದ ಚುನಾವಣಾ ಭಾಷಣಗಳಲ್ಲಿ ಕಳೆದ ಮೂರು ವರ್ಷಗಳಲ್ಲಿಯ ಕೇಂದ್ರ ಮತ್ತು ರಾಜ್ಯ ಸರಕಾರದ ಸಾಧನೆ ಗಳನ್ನು ವಿವರಿಸಿಲ್ಲ,ಅಷ್ಟೇ ಅಲ್ಲ ಬಲಿಷ್ಠ ವಾದ ಕೇಂದ್ರ ಬೇಕು, ಕೇಂದ್ರ ಸರ ಕಾರಕ್ಕೆ ಬೆಂಬಲ ಕೊಡುವ ಸರಕಾರ ಬೇಕೆಂದಷ್ಟೇ ಹೇಳಿ, ಸಮತಾವಾದಿ ಸಮಾಜ, ಗರೀಬಿ ಹಟಾವೊ ಘೋಷಣೆ ಗಳಾಗಲೀ ಅವರ ಬಾಯಿಂದ ಹೊರ ಬೀಳದಿರುವುದು ಆಶ್ಚರ್ಯಕರ. ಕಾಂಗ್ರೆಸ್ ಸರಕಾರ, ಅದರ ಆಡಳಿತೆ, ಕಾಂಗ್ರೆಸ್ ಮುಖಂಡರ ನೀತಿ, ನಡಾ ವಳಿ ಕುರಿತು ಜನರಲ್ಲಿ ನಿರಾಶೆ ಉಂಟಾ ಗಿದೆಯೆಂಬುದನ್ನು ಇದು ತೋರಿಸಿ ಕೊಡುತ್ತದೆ. ಇಂದಿರಾ ಗಾಂಧಿ ಜನ ರನ್ನು ಆಕರ್ಷಿಸುತ್ತಿಲ್ಲ, ಭಾಷಣ ಪರಿ ಣಾಮ ಬೀರುತ್ತಿಲ್ಲ. ಅವರ ಪ್ರಭಾವ ಕಡಿಮೆಯಾಗುತ್ತಿದೆಂಬುದಕ್ಕೆ ಅವರ ಭಾಷಣಕೇಳಲಿಕ್ಕೆ ನೆರೆದ ಅಲ್ಪಸಂಖ್ಯೆಯ ಜನಸಂದಣಿ ಉದಾಹರಣೆ. ಇಂದಿರಾ ಗಾಂಧಿ, ಆಕೆಯ ಸರಕಾರದ ಕುರಿತು ಜನರಲ್ಲುಂಟಾಗಿರುವ ಅಸಮಾಧಾನ, ಅನಾದರ, ಜನವರಿ 5ರಂದು ನಡೆಯುವ ಮತದಾನದಲ್ಲಿ ಸಿ. ಪಿ. ಐ. (ಎಂ), ಸಿ. ಪಿ. ಐ., ಜನತಾ ಮತ್ತು ಕ್ರಾಂತಿ ರಂಗದ ಅಭ್ಯರ್ಥಿಗಳ ಗೆಲುವಿನಲ್ಲಿ ಪರ್ಯವಸಾನವಾಗಿ ಕೊನೆಗೊಳ್ಳಲೆಂಬ ಆಶಯ ನಮ್ಮದು.

O

ಕಾಂ|ಎನ್. ಎಲ್. ಅಸ್ವಸ್ಥ

ಪಕ್ಷದ ಹಿರಿಯ ಮುಂದಾಳು, ರಾಜ್ಯ ಘಟಕದ ಸೆಕ್ರೇಟರಿಯೇಟ್ ಸದಸ್ಯ ಕಾಂ| ಎನ್. ಎಲ್. ಉಪಾ ಧ್ಯಾಯ ಅವರ ದೇಹಸ್ಥಿತಿ ವಿಷಮಿಸಿದ್ದ ರಿಂದ ಅವರನ್ನು ಬೆಂಗಳೂರಿನಲ್ಲಿ ಆಸ್ಪ ತ್ರೆಗೆ ಸೇರಿಸಲಾಗಿದೆ.

ತೀವ್ರ ರಕ್ತ ಒತ್ತಡದಿಂದ ಬಳಲು ತ್ತಿದ್ದ ಅವರು, ಸೌಮ್ಯ ಸ್ವರೂಪದ ಪಾರ್ಶ್ವವಾಯುವಿಗೆ ತುತ್ತಾಗಿದ್ದಾರೆ. ಸಂಪೂರ್ಣ ವಿಶ್ರಾಂತಿಗೆ ವೈದ್ಯರು ಗಳು ಸಲಹೆ ಮಾಡಿದ್ದು, ನಿಧಾನವಾಗಿ ಚೇತರಿಸಿಕೊಳ್ಳುತ್ತಿದ್ದಾರೆಂದು ತಿಳಿದು ಬಂದಿದೆ.

ಆಂಧ್ರ ಪ್ರದೇಶ:

ತುರುಸಿನ ಸ್ಪರ್ಧೆ

ಇಂದಿರಾ ಕಾಂಗ್ರೆಸ್‌ನ ಆಯಕಟ್ಟಿನ ಸ್ಥಳಗಳಲ್ಲಿ ಒಂದೆಂದು ಪರಿಚಿತ ವಾದ ಆಂಧ್ರದಲ್ಲಿ ಈ ಸಲದ ಚುನಾವಣೆಯಲ್ಲಿ ತುರುಸಿನ ಸ್ಪರ್ಧೆ ನಡೆಯಲಿದೆ. ಇಂದಿರಾ ಕಾಂಗ್ರೆಸ್ ಭಿನ್ನಮತೀಯರ, ಪಕ್ಷವಿರೋಧಿ ಚಟುವಟಿಕೆಯಿಂದ ಒಟ್ಟು ಗೊಂದಲದ ಬೀಡಾಗಿದೆ. ಪಕ್ಷದ ಆದೇಶವನ್ನು ಉಲ್ಲಂಘಿಸಿ ಸ್ಪರ್ಧಿ ಸಿದ "65 ಬಂಡಾಯಗಾರ" ರನ್ನು ಪಕ್ಷದಿಂದ ಉಚ್ಚಾಟಿಸಲಾಗಿದೆ. ಇವರಲ್ಲಿ 3 ಜನ ಹಾಲಿ ಮಂತ್ರಿಗಳು ಮತ್ತು 15 ಜನ ಹಾಲಿ ಶಾಸಕರೂ ಸೇರಿದ್ದಾರೆ.

ಸಿ. ಪಿ. ಐ. ಮತ್ತು ಸಿ. ಪಿ. ಐ. (ಎಂ) ಜಂಟಿಯಾಗಿ ಈ ಭಾರಿ ಚುನಾವಣೆಯನ್ನು ಎದುರಿಸಲಿವೆ. ಜನತಾ ಮತ್ತು ಲೋಕದಳದೊಟ್ಟಿಗೆ ಸ್ಥಾನ ಹೊಂದಾಣಿಕೆ ಮಾಡಿಕೊಳ್ಳಲಾಗಿದೆ. ಕಾಂಗ್ರೆಗೆ ವಿರುದ್ಧವಾಗಿ ಏಕೈಕ ಪ್ರತಿಸ್ಪರ್ಧಿಯನ್ನು ನಿಲ್ಲಿಸಬೇಕೆಂದು ಸಿ. ಪಿ. ಐ. (ಎಂ) ತೀವ್ರ ಯತ್ನ ನಡೆ ಸಿತ್ತು. ಎನ್. ಟಿ. ರಾಮರಾವ್ ಅವರ ತೆಲುಗುದೇಶಂನ ಮೊಂಡುವಾದ ದಿಂದಾಗಿ ಈ ಪ್ರಯತ್ನ ವಿಫಲವಾಗಿದೆ.

ಸಿ. ಪಿ. ಐ. (ಎಂ), ಸಿ. ಪಿ. ಐ., ಲೋಕದಳ ಮತ್ತು ಜನತಾ ಈ ನಾಲ್ಕು ಪಕ್ಷಗಳೊಳಗೆ ಸ್ಥಾನ ಹೊಂದಾಣಿಕೆಯ ವಿವರ ಇಂತಿದೆ:

ಸಿ. ಪಿ. ಐ. (ಎಂ)—28, ಸಿ. ಪಿ. ಐ. —52, ಜನತಾ—41, ಮತ್ತು ಲೋಕದಳ—45 ಸ್ಥಾನಗಳಲ್ಲಿ ಸ್ಪರ್ಧಿಸಲಿವೆ.

ಕಾಂಗ್ರೆನ ಜನವಿರೋಧಿ ಧೋರಣೆಗಳಿಗೆ ಬೇಸತ್ತಿರುವ ಜನತೆ ಕಾಂಗ್ರೆಗೆ ಏನು ಶಿಕ್ಷೆ ವಿಧಿಸಲಿದ್ದಾರೆಂಬುದನ್ನು ಈ ಬಾರಿ ಕಾದು ನೋಡಬೇಕು.

ಸಂಪಾದಕೀಯ

[1ನೇ ಪುಟದಿಂದ]

ಅಧಿಕಾರಿಗಳಿಗೆ ಆದೇಶವನ್ನೂ ನೀಡಲಾಗಿತ್ತಂತೆ. ಅನಂತರ ಮಡಿಕೇರಿ, ಸೋಮವಾರಪೇಟೆಯಲ್ಲಿ ಗುಂಡೂರಾಯರ ವಿರುದ್ಧ ನಾಮಪತ್ರ ಸಲ್ಲಿಸಿರುವ ಮುಸ್ಲಿಂ ಲೀಗಿನ ಸ್ಪರ್ಧಿ ಚುನಾವಣೆಯಿಂದ ನಿವೃತ್ತರಾಗಬೇಕೆಂದೂ ಪೋಲೀಸ ನವರು ಒತ್ತಾಯ ಮಾಡುತ್ತಿದ್ದಾರೆಂದೂ ಪ್ರಕಟವಾಗಿದೆ.

ಸರಕಾರಿ ಅಧಿಕಾರಿಗಳನ್ನೂ, ಪೋಲೀಸರನ್ನೂ, ಪೋಲೀಸರ, ಟೆಲಿ ಪ್ರಿಂಟರ್‌ಗಳನ್ನೂ ಈ ಚುನಾವಣೆಯಲ್ಲಿ ತಮ್ಮ ಪಕ್ಷದ ಸಲುವಾಗಿ ಉಪಯೋಗಿ ಸುವ ಧೈರ್ಯವನ್ನು ಗುಂಡೂರಾಯರು ತೋರಿಸಿ, ತಾನು ಬೇಕಾದ್ದನ್ನು ಮಾಡಬಲ್ಲೆ, ನನ್ನನ್ನು ಎದುರಿಸುವವರು ಯಾರು ಎಂಬ ಸವಾಲನ್ನು ಕರ್ನಾಟಕದ ಪ್ರಾಜ್ಞಾನಂತರ ಮುಂದೆ ಎಸೆದಿದ್ದಾರೆ. ಈ ಸವಾಲನ್ನು ಕರ್ನಾಟಕದ ಜನತೆ ಸ್ವೀಕಾರ ಮಾಡುವುದು ಅತ್ಯಗತ್ಯ.

ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ, ಸಂಸ್ಥಾನಗಳ ವಿಲೀನಕ್ಕಾಗಿ, ಗೋವೆಯ ವಿಮೋಚನೆಗಾಗಿ, ಕರ್ನಾಟಕ ಏಕೀಕರಣಕ್ಕಾಗಿ, ಮೈಸೂರು ಕರ್ನಾಟಕವೆಂದು ಹೆಸರಿಡಿಸಿ ಕರೆಯಲ್ಪಡುವ ಸಲುವಾಗಿ, ರೈತರಿಗೆ ಭೂಮಿ, ಕೃಷಿ ಉತ್ಪನ್ನಗೆ ನ್ಯಾಯ ಬೆಲೆ, ಕಾರ್ಮಿಕರಿಗೆ ಹೆಚ್ಚಿನ ಸೌಲಭ್ಯ, ವಿದ್ಯಾರ್ಥಿ –ಯುವ ಜನರ ಸಮಸ್ಯೆಗಳಿಗೋಸ್ಕರ ಕಳೆದ ಹಲವಾರು ವರ್ಷಗಳಿಂದ ಧೀರ ಹೋರಾಟ ನಡೆಸುತ್ತ ಬಂದ ಕರ್ನಾಟಕದ ಜನತೆ ಗುಂಡೂರಾಯರ ಸವಾಲನ್ನು ಸ್ವೀಕರಿಸಿ, ಆ ಸವಾಲಿಗೆ ಜನವರಿ 5 ರಂದು ಸರಿಯಾದ ಉತ್ತರ ಕೊಡುತ್ತಾ ರೆಂದು ಅಪೇಕ್ಷಿಸುತ್ತೇವೆ. ನರಗುಂದ-ನವಲಗುಂದದಲ್ಲಿ ರೈತರ ಮೇಲಾದ ಅಮಾನುಷ ದಬ್ಬಾಳಿಕೆಯನ್ನು, ಗೋಲೀಬಾರನ್ನು ಖಂಡಿಸಿ, ರೈತರಿಗೆ ರಕ್ಷಣೆ ನೀಡಲು ಇಡೀ ರಾಜ್ಯದ ಜನತೆ ಎದ್ದು ನಿಂತಿತ್ತು. ಬೆಲೆಯೇರಿಕೆ, ಕೃಷಿ ಕಾರ್ಮಿಕರಿಗೆ ಕನಿಷ್ಠ ಕೂಲಿ, ಮಿಸಾ, ಎಸ್ಮಾಗಳ ರದ್ದತಿ, ರೈತ ಬೆಳೆಗಳಿಗೆ ನ್ಯಾಯ ಬೆಲೆ, ಕಾರ್ಮಿಕರ ಹಕ್ಕುಗಳಿಗಾಗಿ ಕರ್ನಾಟಕಾದ್ಯಂತ ಬಂದ್, ಮುಷ್ಕರಗಳನ್ನು ನಡೆಸಿದ ಕೆಚ್ಚೆದೆಯ ಕನ್ನಡಿಗರು, ಮಂತ್ರಿಗಳಾ ರಾದ ಸಿ. ಎಂ. ಇಬ್ರಾಹಿಂ, ರೇಣುಕಾ ರಾಜೇಂದ್ರನ್ ಇವರನ್ನು ಅಧಿಕಾರದ ಕುರ್ಚಿಯಿಂದ ಕೆಳಗಿಳಿಸಿದ ಧೀರ ಜನತೆ ಗುಂಡೂರಾಯರ ಸೊಕ್ಕಿಗೆ ಅವರ ಪಕ್ಷ ಇಂದಿರಾ ಪಕ್ಷವನ್ನು ಸೋಲಿಸಿ ಜವಾಬು ಕೊಡಲಿ.

ಕಾಂ| ದಶರಥ ದೇಬ್ ಅವರ ಮೇಲೆ ಬಾಂಬ್ ಧಾಳಿ

ತ್ರಿಪುರಾದ ಶಿಕ್ಷಣ ಮಂತ್ರಿ, ಸಿ. ಪಿ. ಐ. (ಎಂ) ನ ಕಾಂ| ದಶರಥ್ ದೇಬ್ ಅವರು ಚುನಾವಣಾ ಪ್ರಚಾರಕ್ಕಾಗಿ ಹೋಗುತ್ತಿದ್ದಾಗ ಛದ್ಮ ಕಾರಿಗಳು ಅವರ ಕಾರಿನ ಮೇಲೆ ಎಸೆದ ಬಾಂಬ್ ಸ್ಫೋಟಿಸಿದಾಗ ಕಾಂ| ದೇಬ್ ಅವರು ಪ್ರಾಣಾಪಾಯದಿಂದ ಪಾರಾಗಿದ್ದರೂ ಸಹ ಅವರ ಜೊತೆ ಯಲ್ಲಿದ್ದ ಇಬ್ಬರೂ ಅಂಗರಕ್ಷಕರು ಸಾವಿಗೀಡಾದರು. ಕಳೆದ ಐದು ದಿನ ಗಳಲ್ಲಿ ಅವರ ಮೇಲೆ ನಡೆದಿರುವ ಎರಡನೇ ಧಾಳಿ ಇದಾಗಿದೆ.

Printed & Published by P. Ramachandra Rao by him on behalf of the Communist Party of India (Marxist) Karnataka State Committee, L-56 K. V. Temple Street Sultanpet, Bangalore-560 053 Editorial and managerial office :L-56, K. V. Temple Street, Sultanpet, B-560 053. Phone-24154, Prited at Ravee Traders, No. 8/1, J.M. Lane, Balepet Cross, Bangalore-560 053. EDITOR P. RAMACHANDRA RAO